ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೨

**ಪಟ್ಟಿ – ೦೮**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತ ನಾಲ್ಕನೇ ಅಧಿವೇಶನ**

**ಗುರುವಾರ, ದಿನಾಂಕ : ೨೨ನೇ ಫೆಬ್ರವರಿ, ೨೦೧೮**

---

## ಸಮೂಹ – IV

೧. ಮುಖ್ಯಮಂತ್ರಿಗಳು.

೨. ಗೃಹ ಸಚಿವರು.

೩. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು.

೪. ನಗರಾಭಿವೃದ್ಧಿ ಹಾಗೂ ಹಜ್ ಸಚಿವರು.

೫. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

೬. ಅಬಕಾರಿ ಸಚಿವರು.

---

## ಬೆಂಗಳೂರಿನ  ಬೆಳ್ಳಂದೂರು ಕೆರೆ ಅಭಿವೃದ್ಧಿಯ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೩೭ (೧೦೨೯) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಬೆಳ್ಳಂದೂರು ಕೆರೆಯ ಅಭಿವೃದ್ಧಿಗಾಗಿ ಈವರೆಗೆ ಖರ್ಚು ಮಾಡಲಾಗಿರುವ ಹಣ ಎಷ್ಟು; (ವಿವರ ನೀಡುವುದು)

(ಆ) ಬೆಂಗಳೂರಿನ ಬೆಳ್ಳಂದೂರು ಕೆರೆಗೆ ಬೆಂಕಿ ಬಿದ್ದ ಪ್ರಕರಣ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಬಾರಿ ಬೆಂಕಿ ಬಿದ್ದಿದೆ; ಬೆಂಕಿ ಬೀಳಲು ಕಾರಣಗಳೇನು;

(ಇ) ಬೆಳ್ಳಂದೂರು ಕೆರೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಸಿರು ನ್ಯಾಯಪೀಠ ನೀಡಿರುವ ಸೂಚನೆಗಳು ಯಾವುವು; ನ್ಯಾಯಾಲಯವು ಸೂಚನೆ ನೀಡಿದ್ದು ಯಾವಾಗ;

(ಈ) ನ್ಯಾಯಾಲಯ ನೀಡಿರುವ ಎಲ್ಲಾ ಸೂಚನೆಗಳನ್ನು ಸರ್ಕಾರ ಪಾಲಿಸಿದೆಯೇ; ನ್ಯಾಯಾಲಯದ ಸೂಚನೆ ಅನ್ವಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಉ) ಕೆರೆಯು ಕಲುಷಿತಗೊಳ್ಳಲು ಕಾರಣಗಳೇನು; ಕೆರೆಯ ವ್ಯಾಪ್ತಿಯಲ್ಲಿ ಎಷ್ಟು ಕೈಗಾರಿಕೆಗಳು ಹಾಗೂ ಬೃಹತ್ ವಸತಿ ಸಮುಚ್ಚಯಗಳಿವೆ; ನ್ಯಾಯಾಲಯದ ಆದೇಶದ ನಂತರ ಎಷ್ಟು ಕೈಗಾರಿಕೆಗಳನ್ನು ಮುಚ್ಚಲಾಗಿದೆ?

## ವಿವಿಧ ಪಿಂಚಣಿ ಯೋಜನೆಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೩೮ (೧೦೨೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಪಿಂಚಣಿ ಯೋಜನೆಗಳಡಿಯಲ್ಲಿ ಪಿಂಚಣಿ ಮಂಜೂರಾತಿಗಾಗಿ ಕೋರಿ ಬಂದಿರುವ ಅರ್ಜಿಗಳು ಎಷ್ಟು; ಈ ಪೈಕಿ ಎಷ್ಟು ಫಲಾನುಭವಿಗಳಿಗೆ ಪಿಂಚಣಿ ಮಾಡಲಾಗಿದೆ; (ತಾಲ್ಲೂಕುವಾರು ಫಲಾನುಭವಿಗಳ ಹೆಸರು ಮತ್ತು ವಿಳಾಸದೊಂದಿಗೆ ಪೂರ್ಣ ಮಾಹಿತಿ ನೀಡುವುದು)

(ಆ) ೨೦೧೭–೧೮ ನೇ ಸಾಲಿನಲ್ಲಿ ಪಿಂಚಣಿ ಮಂಜೂರಾತಿಗಾಗಿ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಮಂಜೂರಾದ ಅರ್ಜಿಗಳ ಸಂಖ್ಯೆ ಮತ್ತು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಅರ್ಜಿಗಳು ಬಾಕಿ ಇರಲು ಕಾರಣಗಳೇನು; ಬಾಕಿ ಇರುವ ಅರ್ಜಿಗಳನ್ನು ಯಾವ ದಿನಾಂಕದೊಳಗೆ ಮಂಜೂರು ಮಾಡಲಾಗುವುದು? (ತಾಲ್ಲೂಕುವಾರು ವಿವರ ನೀಡುವುದು)

## ಇಂದಿರಾ ಕ್ಯಾಂಟೀನ್ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೩೯ (೧೦೩೦) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಷ್ಟು ವಾರ್ಡ್‌ಗಳಲ್ಲಿ ಇಂದಿರಾ ಕ್ಯಾಂಟೀನ್ ಆರಂಭವಾಗಿವೆ, ಬೃಹತ್

ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಸ್ವತ್ತು, ಮಕ್ಕಳ ಆಟದ ಮೈದಾನ, ಪಾರ್ಕ್ ಮತ್ತು ಖಾಸಗಿಯವರ ಸ್ವತ್ತುಗಳಲ್ಲಿ ನಿರ್ಮಾಣವಾಗಿರುವ ಕ್ಯಾಂಟೀನ್‌ಗಳ ಸಂಖ್ಯೆ ಎಷ್ಟು;

(ಆ) ಒಂದು ಕ್ಯಾಂಟೀನ್ ಕಟ್ಟಡ ನಿರ್ಮಾಣಕ್ಕೆ ವೆಚ್ಚ ಮಾಡಿರುವ ಹಣ ಎಷ್ಟು; ಕ್ಯಾಂಟೀನ್ ನಿರ್ಮಾಣದಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಇ) ಕ್ಯಾಂಟೀನ್ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆ ನೀಡಲು ಟೆಂಡರ್ ಆಹ್ವಾನಿಸಲಾಗಿತ್ತೇ; ಟೆಂಡರ್‌ನಲ್ಲಿ ಎಷ್ಟು ಸಂಸ್ಥೆಗಳು ಭಾಗವಹಿಸಿದ್ದವು; ಈ ಸಂಸ್ಥೆಗಳು ನಮೂದಿಸಿದ್ದ ಟೆಂಡರ್ ಮೊತ್ತ ಎಷ್ಟು; ಯಾವ ಸಂಸ್ಥೆಗೆ ಎಷ್ಟು ಮೊತ್ತಕ್ಕೆ ಯಾವ್ಯಾವ ಷರತ್ತುಗಳೊಂದಿಗೆ ಕಾಮಗಾರಿ ವಹಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಸದರಿ ಕಾಮಗಾರಿಗಳ ಗುಣಮಟ್ಟವನ್ನು ಮೂರನೇ ಪಾರ್ಟಿಯಿಂದ ವೀಕ್ಷಣೆ ಮಾಡಿಸಲಾಗಿದೆಯೇ; ಹಾಗಿದ್ದಲ್ಲಿ, ಅವರ ವರದಿಯ ಸಂಪೂರ್ಣ ವಿವರ ನೀಡುವುದು;

(ಉ) ಕ್ಯಾಂಟೀನ್‌ಗೆ ಊಟ ಮತ್ತು ತಿಂಡಿ ಪೂರೈಕೆ ಗುತ್ತಿಗೆಯನ್ನು ಯಾರಿಗೆ ವಹಿಸಲಾಗಿದೆ; ಪ್ರತಿ ಊಟ ಮತ್ತು ತಿಂಡಿಗೆ ಸರ್ಕಾರ ಎಷ್ಟು ಹಣ ನೀಡುತ್ತಿದೆ; ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗಳೇನು?

## ರಾಜ್ಯಾದ್ಯಂತ ಸರಗಳ್ಳತನ, ಮನೆ ಕಳ್ಳತನ ಮತ್ತು ವಾಹನ ಕಳ್ಳತನ ಪ್ರಕರಣಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೪೦ (೧೦೩೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷದಿಂದ ರಾಜ್ಯಾದ್ಯಂತ ನಡೆದಿರುವ ಸರಗಳ್ಳತನ, ಮನೆ ಕಳ್ಳತನ ಮತ್ತು ವಾಹನ ಕಳ್ಳತನ ಪ್ರಕರಣಗಳೆಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ; ಇವರಿಂದ ವಶಪಡಿಸಿಕೊಂಡಿರುವ ವಸ್ತುಗಳ ವಿವರ ನೀಡುವುದು; (ಜಿಲ್ಲಾವಾರು ವಿವರ ನೀಡುವುದು)

(ಇ) ಇತ್ತೀಚಿನ ದಿನಗಳಲ್ಲಿ ಈ ರೀತಿಯ ಪ್ರಕರಣಗಳು ಹೆಚ್ಚಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸದರಿ ಪ್ರಕರಣಗಳನ್ನು ಹತೋಟಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಅಮೃತ್ ಸಿಟಿ ಯೋಜನೆಗೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು):–**

೭೪೧ (೧೦೪೪) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅಮೃತ್ ಸಿಟಿ ಯೋಜನೆಯಲ್ಲಿ ಯಾವ ಯಾವ ನಗರಗಳನ್ನು ಆಯ್ಕೆ ಮಾಡಲಾಗಿದೆ; (ವಿವರ ನೀಡುವುದು)

(ಆ) ಅಮೃತ್ ಸಿಟಿ ಯೋಜನೆಗೆ ಇದುವರೆವಿಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು; ಖರ್ಚಾಗಿರುವ ಅನುದಾನವೆಷ್ಟು; (ವರ್ಷಾವಾರು, ನಗರವಾರು ವಿವರ ನೀಡುವುದು)

(ಇ) ಅಮೃತ್ ಸಿಟಿ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳು ಯಾವುವು; ಇವು ಯಾವ ಹಂತದಲ್ಲಿದೆ? (ನಗರವಾರು, ವರ್ಷಾವಾರು ಮಾಹಿತಿ ನೀಡುವುದು)

## ಸರ್ಕಾರವು ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸಲು ಎ.ಸಿ.ಬಿ. ಯನ್ನು ಸೃಜಿಸಿರುವ ಕುರಿತು

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೪೨ (೯೨೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರವು ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸಲು ಎ.ಸಿ.ಬಿ. ಯನ್ನು ಸೃಜನೆ ಮಾಡಿದೆಯೇ; ಎ.ಸಿ.ಬಿ. ಲೋಕಾಯುಕ್ತ ಸಂಸ್ಥೆಯಷ್ಟೆ ಪರಿಣಾಮಕಾರಿಯಾಗಿದೆಯೇ;

(ಆ) ಎ.ಸಿ.ಬಿ. ಸಂಸ್ಥೆಯ ಕಾರ್ಯವ್ಯಾಪ್ತಿ ಏನು;

(ಇ) ಲೋಕಾಯುಕ್ತ ಸಂಸ್ಥೆಯಲ್ಲಿರುವ ಸಿಬ್ಬಂದಿಗಳನ್ನು ಎ.ಸಿ.ಬಿ.ಗೆ ವರ್ಗಾಯಿಸಲಾಗಿದೆಯೇ; ಎರಡೂ ಸಂಸ್ಥೆಗಳ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) ಈ ಸಂಸ್ಥೆಯಲ್ಲಿ ತನಿಖೆಯು ನಿರೀಕ್ಷಿತ ಮಟ್ಟದ ಗುಣಮಟ್ಟದಲ್ಲಿ ನಡೆಯುತ್ತಿದೆಯೇ;

(ಈ) ೨೦೧೫ನೇ ಸಾಲಿನಲ್ಲಿ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾದ ಪ್ರಕರಣಗಳೆಷ್ಟು; (ವಿವರ ನೀಡುವುದು)

(ಉ) ೨೦೧೭ನೇ ಸಾಲಿನಲ್ಲಿ ಎ.ಸಿ.ಬಿ. ಯಲ್ಲಿ ದಾಖಲಾದ ಪ್ರಕರಣಗಳೆಷ್ಟು; (ವಿವರ ನೀಡುವುದು)

(ಊ) ಎ.ಸಿ.ಬಿ. ಸಂಸ್ಥೆಯ ಸಿಬ್ಬಂದಿಗಳಿಗೆ ಸೂಕ್ತ ಸೌಕರ್ಯ ಒದಗಿಸುವಲ್ಲಿ ಸರ್ಕಾರ ವಿಫಲಾವಾಗಿದೆ ಎಂಬ ಗಂಭೀರ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

## ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳ ಹುದ್ದೆ ತುಂಬುವ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು):–**

೭೪೩ (೧೦೪೩) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಎಷ್ಟು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಖ್ಯಾಧಿಕಾರಿಗಳ ಹುದ್ದೆ ಖಾಲಿ ಇರುತ್ತದೆ; (ಗ್ರೇಡ್‌ವಾರು ವಿವರ ನೀಡುವುದು)

(ಆ) ಎಷ್ಟು ಸ್ಥಳೀಯ ಸಂಸ್ಥೆಗಳಲ್ಲಿ ಅನ್ಯ ಇಲಾಖೆಯವರು ಹಾಗೂ ಸ್ಥಳೀಯ ಸಂಸ್ಥೆಯ ಇತರೆ ನೌಕರರು ಮುಖಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ; (ವಿವರ ನೀಡುವುದು)

(ಇ) ಈ ಹುದ್ದೆಗಳು ಎಷ್ಟು ವರ್ಷದಿಂದ ಖಾಲಿ ಇವೆ; ಈ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಈ) ಈ ಹುದ್ದೆಗಳನ್ನು ಮುಂಬಡ್ತಿಯಿಂದ ತುಂಬಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು; ಇಲ್ಲದಿದ್ದಲ್ಲಿ, ಮುಂಬಡ್ತಿಯಿಂದ ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

## ಘನತ್ಯಾಜ್ಯ ವಿಲೇವಾರಿ ಆಗದಿರುವ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೪೪ (೯೨೨) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಪುರಸಭೆಗಳಲ್ಲಿ ಪೌರ ಕಾರ್ಮಿಕರ ಕೊರತೆಯಿಂದಾಗಿ ಘನತ್ಯಾಜ್ಯ ವಿಲೇವಾರಿ ಆಗದೆ ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಕುರಿತು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ಪುರಸಭೆಗಳಲ್ಲಿ ಒಟ್ಟು ಮಂಜೂರಾಗಿರುವ ಪೌರ ಕಾರ್ಮಿಕರ ಹುದ್ದೆಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು)

(ಇ) ಖಾಲಿ ಇರುವ ಪೌರ ಕಾರ್ಮಿಕರನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು;

(ಈ) ಘನತ್ಯಾಜ್ಯ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲಿದೆ? (ವಿವರವಾದ ಮಾಹಿತಿ ನೀಡುವುದು)

## ಕಲಬುರಗಿ ನಗರದಲ್ಲಿ ಎಲ್ಲಾ ವಾರ್ಡ್‍ಗಳಲ್ಲಿ ೨೪x೭ ನಿರಂತರ ನೀರು ಸರಬರಾಜು ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೭೪೫ (೯೪೫) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ನಗರದಲ್ಲಿ ಪ್ರಸ್ತುತ ಎಷ್ಟು ವಾರ್ಡ್‍ಗಳಿಗೆ ೨೪x೭ ನಿರಂತರ ನೀರು ಸರಬರಾಜು ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ;

(ಆ) ನಗರದ ಎಲ್ಲಾ ವಾರ್ಡ್‍ಗಳಿಗೂ ಈ ಯೋಜನೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯೋಜನೆಯ ಸಮಗ್ರ ವಿವರ ನೀಡುವುದು;

(ಇ) ಎಲ್ಲಾ ವಾರ್ಡ್‍ಗಳಿಗೆ ಈ ಯೋಜನೆ ವಿಸ್ತರಿಸುವ ಪ್ರಕ್ರಿಯೆ ಪೂರ್ಣಗೊಳ್ಳುವುದು ಯಾವಾಗ? (ವಿವರ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಾಣದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೭೪೬ (೯೪೬) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸ್ವಚ್ಛ ಭಾರತ ಅಭಿಯಾದ ಅಡಿಯಲ್ಲಿ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಎಷ್ಟು ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇದಕ್ಕಾಗಿ ರಾಜ್ಯ ಸರ್ಕಾರ ಇದುವರೆಗೆ ಮಾಡಿರುವ ವೆಚ್ಚ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ವೈಯಕ್ತಿಕ ಶೌಚಾಲಯಗಳ ಗುರಿ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಕಲಂ ೩೭೧(ಜೆ) ಅಡಿ ಈವರೆಗೆ ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಹಣ ಬಿಡುಗಡೆ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೭೪೭ (೯೪೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಂ ೩೭೧ (ಜೆ) ಅಡಿ ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಈವರೆಗೆ ಬಿಡುಗಡೆಯಾದ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು; ಯಾವ ಯಾವ ಇಲಾಖೆಗೆ ಎಷ್ಟು ಅನುದಾನ ನೀಡಲಾಗಿದೆ; (ವಿವರ ನೀಡುವುದು)

(ಆ) ಕಲಂ ೩೭೧ (ಜೆ) ಅಡಿ ಈ ಭಾಗದ ಎಷ್ಟು ಜನರಿಗೆ ಇಂಜಿನಿಯರಿಂಗ್, ಮೆಡಿಕಲ್ ಸೀಟುಗಳು ಲಭ್ಯವಾಗಿವೆ? (ವಿವರ ನೀಡುವುದು)

## ಮಹಿಳಾ ಸಂಘಟನೆಗಳು ಸಾರಾಯಿ ಮಾರಾಟ ನಿಷೇಧಿಸಲು ಒತ್ತಾಯಿಸುತ್ತಿರುವ ಬಗ್ಗೆ

**ಶ್ರೀ ಎನ್. ಎಸ್. ಬೋಸ್‌ರಾಜು(ವಿಧಾನಸಭೆಯಿಂದ ಚುನಾಯಿತರಾದವರು):–**

೭೪೮ (೧೦೩೪) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿ ವಿವಿಧ ಮಹಿಳಾ ಸಂಘಟನೆಗಳು ಕೆಲವು ಗ್ರಾಮಗಳಲ್ಲಿ ಸಾರಾಯಿ ಮಾರಾಟ ನಿಷೇಧಿಸಲು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು;

(ಆ) ಗ್ರಾಮಾಂತರ ಪ್ರದೇಶಗಳಲ್ಲಿ ಪರವಾನಗಿ ಇಲ್ಲದೆ ಸಾರಾಯಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು

**ಶ್ರೀ ಎನ್. ಎಸ್. ಬೋಸ್‌ರಾಜು(ವಿಧಾನಸಭೆಯಿಂದ ಚುನಾಯಿತರಾದವರು):–**

೭೪೯ (೧೦೩೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ೩೭೧(ಜೆ) ಕಲಂ ಪ್ರಕಾರ ೨೦೧೩–೧೪ ರಿಂದ ೨೦೧೭–೧೮ರ ವರೆಗೂ ವಿವಿಧ ಇಲಾಖೆಗಳಲ್ಲಿ ಭರ್ತಿ ಮಾಡಿರುವ ಹುದ್ದೆಗಳ ಸಂಖ್ಯೆ ಎಷ್ಟು;

(ಆ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹಗಳ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಎನ್. ಎಸ್. ಬೋಸ್‌ರಾಜು(ವಿಧಾನಸಭೆಯಿಂದ ಚುನಾಯಿತರಾದವರು):–**

೭೫೦ (೧೦೩೩) ಮಾನ್ಯ ಗೃಹ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ರಾಯಚೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹಗಳ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೆವೆನ್ಯೂ ನಿವೇಶನಕ್ಕೆ ಬದಲಿ ನಿವೇಶನ ನೀಡುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೭೫೧ (೧೦೦೮) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಸ್ವಾಧೀನ ಕ್ರಮದಿಂದ ರೆವೆನ್ಯೂ ನಿವೇಶನಗಳನ್ನು ಕಳೆದುಕೊಂಡ ನಿವೇಶನದಾರರಿಗೆ ಬದಲಿ ನಿವೇಶನ ನೀಡಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ಇಲ್ಲಿಯವರೆಗೂ ಈ ಸಂಬಂಧ ಎಷ್ಟು ಬದಲಿ ನಿವೇಶನ ನೀಡಲಾಗಿದೆ; ಬಾಕಿ ಇರುವ ಅರ್ಜಿಗಳೆಷ್ಟು; (ಬಡಾವಣೆಗಳವಾರು ಮಾಹಿತಿ ನೀಡುವುದು)

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಎಲ್ಲಾ ದಾಖಲೆಗಳೂ ಸರಿ ಇದ್ದರೂ ಕೂಡ ನೋಂದಣಿ ಕಾರ್ಡ್ ಇಲ್ಲವೆಂದು ಅರ್ಜಿಗಳನ್ನು ವಿಲೇ ಇಡುತ್ತಿರುವುದು ನಿಜವೇ;

(ಈ) ರೆವೆನ್ಯೂ ನಿವೇಶನಕ್ಕೆ ಬದಲೀ ನಿವೇಶನ ಪಡೆಯುವ ಸಂಬಂಧ ನೋಂದಣಿ ಕಾರ್ಡ್ ನೀಡಲು ಸರ್ಕಾರದಲ್ಲಿ ಕಡತ ಸಂಖ್ಯೆ UDD 100 MNX 2017 ನ್ನು ಯಾವ ದಿನಾಂಕದಂದು ಪ್ರಾರಂಭ ಮಾಡಲಾಯಿತು; ಈಗ ಯಾವ ಹಂತದಲ್ಲಿದೆ;

(ಉ) ಯಾವ ಕಾಲಾಮಿತಿಯೊಳಗೆ ಸದರಿ ಕಡತಕ್ಕೆ ಸರ್ಕಾರ ಅನುಮತಿ ನೀಡುವುದು;

(ಊ) ಈ ಕಡತದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಎಷ್ಟು ಜನರಿಗೆ ನೋಂದಣಿ ಕಾರ್ಡ್/ಅನುಮತಿ ನೀಡಲು ಶಿಫಾರಸ್ಸು ಮಾಡಿ ಪಟ್ಟಿ ಸಲ್ಲಿಸಿರುತ್ತಾರೆ? (ಸಂಪೂರ್ಣ ವಿವರ ನೀಡುವುದು)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳ ಆರೋಗ್ಯ ವಿಮೆ ಯೋಜನೆ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೭೫೨ (೯೫೧) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ, ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು;

(ಆ) ಈ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವರ್ಗಾವಾರು ವಿವರ ನೀಡುವುದು)

(ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧೀನದಲ್ಲಿ ಬರುವ ಶಾಲಾ–ಕಾಲೇಜು ವಿದ್ಯಾರ್ಥಿಗಳ ಆರೋಗ್ಯಕ್ಕಾಗಿ ವಿಮೆ ಮಾಡಿಸಲು ಎಷ್ಟು ಹಣವನ್ನು ಮೀಸಲಿಡಲಾಗಿದೆ;

(ಈ) ವಿಮೆಗಾಗಿ ಮೀಸಲಿಟ್ಟ ಹಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

(ಉ) ವಿಮೆಗಾಗಿ ಮೀಸಲಿಟ್ಟ ಹಣದಲ್ಲಿ ಖರ್ಚು ಮಾಡದೆ ಬಾಕಿ ಇರುವ ಹಣವೆಷ್ಟು; ಇದನ್ನು ಖರ್ಚು ಮಾಡದೇ ಇರುವುದಕ್ಕೆ ಕಾರಣಗಳೇನು? (ವಿವರ ನೀಡುವುದು)

## ರಾಜ್ಯದ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಸಿಬ್ಬಂದಿ ಕೊರತೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೭೫೩ (೯೪೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪೊಲೀಸ್ ತನಿಖೆಗೆ ಪೂರಕವಾಗಿ ಕಾರ್ಯನಿರ್ವಹಿಸುವ ವಿಧಿವಿಜ್ಞಾನ ಪ್ರಯೋಗಾಲಯಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಭ್ರಷ್ಟರ ವಿರುದ್ಧ ವಿಚಾರಣೆಗೆ ಹಿನ್ನೆಡೆ ಹಾಗೂ ದೋಷಾರೋಪಾ ಪಟ್ಟಿ ಸಲ್ಲಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬೆಂಗಳೂರಿನಲ್ಲಿ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಮಂಜೂರಾದ ವಿವಿಧ ಹುದ್ದೆಗಳು, ವರ್ಗಾವಾರು ವಿವರ ನೀಡುವುದು;

(ಇ) ಈ ಪ್ರಯೋಗಾಲಯದಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

(ಈ) ಈ ಸಮಸ್ಯೆಯ ಶೀಘ್ರ ಪರಿಹಾರಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ನಗರದ ವಸತಿ ಸಮುಚ್ಛಯ ಕೊಳಚೆ ನೀರು ಶುದ್ಧೀಕರಣ ಘಟಕ ಸ್ವಚ್ಛಗೊಳಿಸುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೭೫೪ (೯೫೨) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಗರ ವಸತಿ ಸಮುಚ್ಚಯ ಕೊಳಚೆ ನೀರು ಶುದ್ಧೀಕರಣ ಘಟಕ (ಎಸ್.ಟಿ.ಪಿ)ವನ್ನು ಸ್ವಚ್ಛಗೊಳಿಸುವುದರ ಬಗ್ಗೆ ನಿಯಮಗಳು ಇವೆಯೇ; ಇದ್ದರೆ, ವಿವರ ನೀಡುವುದು;

(ಆ) ಬೆಂಗಳೂರಿನ ಸೋಮಸಂದ್ರಪಾಳ್ಯದ ಅಪಾರ್ಟ್‌ಮೆಂಟ್ ಒಂದರಲ್ಲಿ ಗತಿಸಿದ ಘಟನೆಯಲ್ಲಿ ೩ ಜನ ಕಾರ್ಮಿಕರ ಪ್ರಾಣ ಹಾನಿಯಾಗಿದ್ದು, ಇದರ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿದೆ;

(ಇ) ಈ ತರಹದ ಕೂಲಿ ಕಾರ್ಮಿಕರ ಮರಣವನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

## ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮಾದಕ ವಸ್ತುಗಳು ದೊರಕುತ್ತಿರುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೭೫೫ (೯೪೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಮಾದಕ ವಸ್ತುಗಳು ಸುಲಭವಾಗಿ ದೊರಕುತ್ತದೆ ಎಂದು ಪತ್ರಿಕೆಯಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಣ ನೀಡಿದರೆ ಕೈದಿಗಳು ತಮಗೆ ಬೇಕಾದ ಆಹಾರವನ್ನು ಸೆಲ್ ಒಳಗಡೆ ತರಿಸಿಕೊಳ್ಳುವ ಅವಕಾಶ ಇರುವುದು ನಿಜವೇ;

(ಇ) ಇಷ್ಟೊಂದು ಕಟ್ಟುನಿಟ್ಟಾದ ನಿಯಮಗಳಿದ್ದರೂ ಜೈಲ್ ಒಳಗಡೆ ಖೈದಿಗಳೂ ಮೊಬೈಲ್ ಫೋನ್ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಖೈದಿಗಳ ಸಂಬಂಧಿಕರ ಊಟದ ಪಾಕೇಟ್/ಪೊಟ್ಟಣಗಳ ಮೂಲಕ ವಸ್ತುಗಳನ್ನು ಹಾಗೂ ಹಣವನ್ನು ಸರಬರಾಜು ಮಾಡುತ್ತಿರುವುದು ವರದಿಯಾಗಿದ್ದು, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಉ) ಈ ಎಲ್ಲಾ ಕ್ರಮಗಳನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

## ಪೊಲೀಸ್ ಠಾಣೆಗಳಲ್ಲಿ ದೂರುದಾರರಿಗೆ ದೂರಿನ ಬಗ್ಗೆ ಮಾಹಿತಿ ನೀಡುವುದರ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೫೬ (೯೮೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರು ದೂರು ನೀಡಿದ ಮೇಲೆ ಆ ಬಗ್ಗೆ ಪೊಲೀಸರು ಯಾವ ಕ್ರಮ ಕೈಗೊಂಡಿದ್ದಾರೆ, ದೂರಿನ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ದೂರುದಾರರಿಗೆ ತಿಳಿಸುವ ವ್ಯವಸ್ಥೆ ಇದೆಯೇ;

(ಆ) ಎಷ್ಟು ದಿನಗಳಲ್ಲಿ ದೂರುದಾರರಿಗೆ ಮಾಹಿತಿ ನೀಡಲಾಗುತ್ತದೆ; ಮೇಲಾಧಿಕಾರಿಗಳು, ಪೊಲೀಸರು ಕೈಗೊಂಡ ಕ್ರಮದ ಬಗ್ಗೆ ವಿಚಾರಣೆ ಮಾಡಿ ವರದಿ ಕೇಳುತ್ತಾರೆಯೇ; ಯಾವ ವ್ಯವಸ್ಥೆ ಅನುಸರಿಸಲಾಗುತ್ತಿದೆ;

(ಇ) ಪೊಲೀಸ್ ಠಾಣೆಗೆ ದೂರು ನೀಡಿದರೆ ಸಮಸ್ಯೆಗೆ ಪರಿಹಾರ ಸಿಗುತ್ತದೆನ್ನುವ ವಿಶ್ವಾಸ ಬರುವಂತೆ ಯಾವ ಕ್ರಮ ಕೈಗೊಳ್ಳುತ್ತೀರಿ;

(ಈ) ಹಿರಿಯ ಪೊಲೀಸ್ ಅಧಿಕಾರಿಗಳು ಸಾರ್ವಜನಿಕರೊಡನೆ ಸಭೆ ನಡೆಸಿ ಬಡಾವಣೆಗಳಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಸಲಹೆ–ಸೂಚನೆಗಳನ್ನು

ಪಡೆಯುವರೇ; ಬೆಂಗಳೂರು ನಗರದಲ್ಲಿ ಎಷ್ಟು ಇಂತಹ ಸಭೆಗಳನ್ನು ನಡೆಸಲಾಗಿದೆ; ಮಾಹಿತಿ ಒದಗಿಸುವುದು?

## ಅಪರಾಧವೆಸಗಿದಾಗ ಮಾತ್ರ ದಾಖಲೆ ಪರಿಶೀಲನೆ ಮಾಡುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೫೭ (೯೮೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅಪರಾಧವೆಸಗದಿದ್ದಾಗಲು ಬೆಂಗಳೂರು ನಗರದಲ್ಲಿ ವಾಹನಗಳನ್ನು ತಡೆದು ತಪಾಸಣೆ ಮಾಡುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅಪರಾಧವೆಸಗಿದಾಗ ಮಾತ್ರ ದಾಖಲೆಗಳನ್ನು ತಪಾಸಣೆ ಮಾಡಬೇಕೆಂದು ಪೊಲೀಸ್ ಕಮಿಷನರ್ ಸುತ್ತೋಲೆ ಹೊರಡಿಸಿರುವರೇ;

(ಇ) ಆ ರೀತಿಯ ಸುತ್ತೋಲೆ ಇದ್ದರೂ, ಓಡಾಡುವ ವಾಹನಗಳನ್ನು ನಿಲ್ಲಿಸಿ ದಾಖಲೆಗಳನ್ನು ಪರಿಶೀಲನೆ ಮಾಡುತ್ತಿರುವ ಪೊಲೀಸರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

## ರೇಸ್‌ಕೋರ್ಸ್ ಸ್ಥಳಾಂತರಿಸುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೫೮ (೯೮೨) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ರೇಸ್‌ಕೋರ್ಸ್‌ನ್ನು ನಗರದ ಹೊರ ವಲಯಕ್ಕೆ ಸ್ಥಳಾಂತರಿಸಬೇಕೆನ್ನುವ ಸರ್ಕಾರದ ಹಿಂದಿನ ತೀರ್ಮಾನ ಏನಾಯಿತು; ಹೊರ ವಲಯಕ್ಕೆ ಸ್ಥಳಾಂತರಿಸುವ ಆಲೋಚನೆ ಇದೆಯೇ;

(ಆ) ರೇಸ್‌ಕೋರ್ಸ್‌ನ್ನು ಸ್ಥಳಾಂತರಿಸಿ ಆ ಜಾಗದಲ್ಲಿ ಅಮ್ಯೂಸ್ಮೆಂಟ್ ಪಾರ್ಕ್ ನಿರ್ಮಿಸುವ ಆಲೋಚನೆ ಸರ್ಕಾರಕ್ಕಿದೆಯೇ;

(ಇ) ಇದ್ದರೆ, ಎಷ್ಟು ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು?

## ರಾಮನಗರ ನಗರಸಭೆಯಲ್ಲಿ “ಇ” ಖಾತೆಗಳನ್ನು ತೆರೆಯುವಲ್ಲಿ ವಿಳಂಬ ಮಾಡುತ್ತಿರುವ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೫೯ (೯೭೨) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಈಗಾಗಲೇ ನೋಂದಣಿಯಾಗಿರುವ ನಗರಸಭೆಯ ನಿವೇಶನ/ಕಟ್ಟಡಗಳ ಖಾತೆಗಳನ್ನು “ಇ” ಖಾತೆಗೆ ಬದಲಾವಣೆ ಮಾಡಲು ಸರ್ಕಾರದಿಂದ ಆದೇಶ ಹೊರಡಿಸಲಾಗಿದ್ದರೆ, ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕವನ್ನು ನೀಡಲಾಗುವುದೇ;

(ಆ) ನೋಂದಣಿಯಾಗಿರುವ ಖಾತೆಗಳನ್ನು “ಇ” ಖಾತೆಗೆ ಬದಲಾವಣೆ ಮಾಡಲು ನಿವೇಶನ/ಕಟ್ಟಡ ಮಾಲೀಕರಿಂದ ಪುನಃ ದಾಖಲೆಗಳನ್ನು ಪಡೆಯದೇ ನೇರವಾಗಿ “ಇ” ಖಾತೆಯನ್ನು ತೆರೆಯಲು ಇರುವ ಅಡಚಣೆಗಳೇನು;

(ಇ) “ಇ” ಖಾತೆಗಾಗಿ ಅರ್ಜಿ ನಮೂನೆಯನ್ನು ಸಲ್ಲಿಸಿ ಸಂಬಂಧಪಟ್ಟ ದಾಖಲಾತಿಗಳನ್ನು ನೀಡಿದ್ದಲ್ಲಿ “ಇ” ಖಾತೆಯನ್ನು ತೆರೆಯಲು ಕನಿಷ್ಟ ಎಷ್ಟು ಕಾಲಾವಧಿ ಬೇಕಾಗುತ್ತದೆ;

(ಈ) ರಾಮನಗರ ನಗರಸಭೆಯಲ್ಲಿ ಖಾತೆ ನೋಂದಣಿ ಪೂರ್ವದಲ್ಲಿ ಅಗತ್ಯ ದಾಖಲೆಗಳನ್ನು ಪಡೆದು ಪುನಃ “ಇ” ಖಾತೆಗೆ ಬದಲಾವಣೆ

ಮಾಡಿಕೊಡಲು ಅರ್ಜಿಯ ನಮೂನೆಯೊಂದಿಗೆ ಸಂಬಂಧಪಟ್ಟ ದಾಖಾಲಾತಿಗಳನ್ನು ನೀಡಿದ್ದರೂ ಸಹ ೪ ತಿಂಗಳುಗಳಾದರೂ ಈವರೆಗೆ "ಇ" ಖಾತೆಗಳನ್ನು ತೆರೆಯದೇ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಈಗಾಗಲೇ ನೋಂದಣಿಯಾಗಿರುವ ಖಾತೆಗಳಿಗೆ ಅರ್ಜಿದಾರರಿಂದ ದಾಖಲೆಗಳನ್ನು ಪಡೆಯದೇ "ಇ" ಖಾತೆಗಳನ್ನು ನೇರವಾಗಿ ತೆರೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ?

## ಸರ್ಕಾರಿ ಕಛೇರಿಗಳಲ್ಲಿ ವಾಟ್ಸಪ್, ಟೆಕ್ಸ್ಟ್ ಸಂದೇಶದ ಮೂಲಕ ಗಂಭಿರವಾದ ಆದೇಶಗಳನ್ನು ಸಿಬ್ಬಂದಿಗಳಿಗೆ ನೀಡುತ್ತಿರುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೦ (೯೨೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿವಿಧ ಇಲಾಖೆಗಳಲ್ಲಿ ಮೇಲಾಧಿಕಾರಿಗಳು ವಾಟ್ಸಪ್, ಮೊಬೈಲ್ ಮೆಸೇಜ್‌ಗಳಲ್ಲಿ ಟೆಕ್ಸ್ಟ್ ಸಂದೇಶಗಳ ರೂಪದಲ್ಲಿ ಆದೇಶ ಮತ್ತು ನಿರ್ದೇಶನಗಳನ್ನು ಹೊರಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ವಿವಿಧ ಇಲಾಖೆಗಳಲ್ಲಿ ಮೇಲಾಧಿಕಾರಿಗಳು ವಾಟ್ಸಪ್, ಮೊಬೈಲ್ ಮೆಸೇಜ್‌ಗಳಲ್ಲಿ ನೀಡುವ ಟೆಕ್ಸ್ಟ್ ಸಂದೇಶಗಳು ಅಧಿಕೃತ ಆದೇಶವಾಗಿ ಪರಿಗಣಿಸಲಾಗುವುದೇ; ಹೌದಾದಲ್ಲಿ, ಸದರಿ ಸಂದೇಶಗಳ ರೂಪದಲ್ಲಿರುವ ನಿರ್ದೇಶನಗಳನ್ನು ಕಡತದಲ್ಲಿ ಯಾವ ಮಾದರಿಯಲ್ಲಿ ದಾಖಲೀಕರಣ ಮಾಡಲಾಗುತ್ತಿದೆ;

(ಇ) ಸದರಿ ಗೊಂದಲ ನಿವಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ;

(ಈ) ವಿವಿಧ ಇಲಾಖೆಗಳಲ್ಲಿ ಮೇಲಾಧಿಕಾರಿಗಳು ಆದೇಶ ಮತ್ತು ನಿರ್ದೇಶನಗಳನ್ನು ಕಡ್ಡಾಯವಾಗಿ ಲಿಖಿತ ಸಹಿಯುಳ್ಳ ಸ್ಕ್ಯಾನ್ ಪ್ರತಿಯನ್ನು ಮಾತ್ರವೇ ವಾಟ್ಸಪ್‌ಗಳ ಮೂಲಕ ಅಧೀನ ಕಛೇರಿಗೆ ತಲುಪಿಸುವುದನ್ನು ಅಧಿಕೃತಗೊಳಿಸಲಾಗುವುದೇ;

(ಉ) ಇಲಾಖೆಗಳಲ್ಲಿ ವಾಟ್ಸಪ್, ಮೊಬೈಲ್ ಮೆಸೇಜ್, ಈ–ಮೇಲ್‌ಗಳನ್ನು ಸಂವಹನಕ್ಕೆ ಸೀಮಿತಗೊಳಿಸಲು ಮತ್ತು ಲಿಖಿತ ಅಧಿಕೃತ ಆದೇಶ ಪ್ರಸರಣಕ್ಕೆ ಮಾತ್ರ ಬಳಸಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? (ವಿವರ ನೀಡುವುದು)

## ಪೌರಾಡಳಿತ ಜನಪ್ರತಿನಿಧಿಗಳು ಮತ್ತು ಅವರ ಸಾಮರ್ಥ್ಯಭಿವೃದ್ಧಿ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೧ (೯೨೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳ ಸಂಖ್ಯೆ ಎಷ್ಟು; ಅವು ಯಾವುವು;

(ಆ) ರಾಜ್ಯದಲ್ಲಿರುವ ಒಟ್ಟು ನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಸಂಖ್ಯೆ ಎಷ್ಟು; (ಪುರುಷ, ಮಹಿಳೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರತಿನಿಧಿಗಳ ವಿವರ ನೀಡವುದು)

(ಇ) ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಪ್ರಸಕ್ತ ನೀಡುತ್ತಿರುವ ಗೌರವಧನವೆಷ್ಟು; ಗೌರವಧನ ನಿಗಧಿಯಾಗಿರುವ ಮಾನದಂಡಗಳೇನು;

(ಈ) ನಗರ ಸ್ಥಳೀಯ ಸಂಸ್ಥೆಗಳ (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್) ಪ್ರತಿನಿಧಿಗಳ ತರಬೇತಿ ಸಾಮರ್ಥ್ಯಭಿವೃದ್ಧಿಗೆ ಸರ್ಕಾರ

ಕೈಗೊಂಡ ಕ್ರಮುಗಳೇನು; ಕಳೆದ ೪ ವರ್ಷದಲ್ಲಿ ತರಬೇತಿ ಸಾಮರ್ಥ್ಯಭಿವೃದ್ಧಿಗೆ ಸರ್ಕಾರ ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ಅನುದಾನವೆಷ್ಟು;

(ಉ) ಪೌರಾಡಳಿತ ಸಂಸ್ಥೆಗಳಲ್ಲಿನ ಆಡಳಿತಾತ್ಮಕ ಸಮಸ್ಯೆಗಳು, ಪ್ರತಿನಿಧಿಗಳ ತರಬೇತಿ ಸಾಮರ್ಥ್ಯಭಿವೃದ್ಧಿ ಹಾಗೂ ಕಾಯಿದೆಯಲ್ಲಿನ ಕೆಲವು ಪ್ರಕರಣಗಳನ್ನು ಪ್ರಸಕ್ತ ಕಾಲಘಟ್ಟಕ್ಕೆ ಅನುಗುಣವಾಗಿ ತಿದ್ದುಪಡಿಯ ಅಗತ್ಯತೆ ಕುರಿತು ಸಮಿತಿ ರಚನೆಯ ಬಗ್ಗೆ ಸರ್ಕಾರದ ನಿಲುವೇನು; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೇ?

## ಲೋಕಾಯುಕ್ತ ಮತ್ತು ಎ.ಸಿ.ಬಿ. ಸಂಸ್ಥೆಗಳಲ್ಲಿ ದಾಖಲಾಗುವ ಪ್ರಕರಣಗಳ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೨ (೯೮೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಲೋಕಾಯುಕ್ತ ಮತ್ತು ಎ.ಸಿ.ಬಿ ತನಿಖಾ ಸಂಸ್ಥೆಗಳಲ್ಲಿ ಕಳೆದ ೪ ವರ್ಷಗಳಲ್ಲಿ ರಾಜ್ಯದ ಜನಪ್ರತಿನಿಧಿಗಳು, ವಿವಿಧ ಇಲಾಖೆಯಲ್ಲಿನ ಅಧಿಕಾರಿ, ನೌಕರರ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿವೆ; (ಇಲಾಖಾವಾರು ಮಾಹಿತಿ ಒದಗಿಸುವುದು)

(ಆ) ಲೋಕಾಯುಕ್ತ ಮತ್ತು ಎ.ಸಿ.ಬಿ ತನಿಖಾ ಸಂಸ್ಥೆಗಳು, ವಿವಿಧ ಇಲಾಖೆಯ ಜನಪ್ರತಿನಿಧಿಗಳು, ನೌಕರರ/ಅಧಿಕಾರಿಗಳ ವಿರುದ್ಧದ ಇಲಾಖಾ ವಿಚಾರಣೆಗೆ ಸರ್ಕಾರದ ಹಂತದಲ್ಲಿ ಅನುಮತಿಗೆ ಸ್ವೀಕೃತವಾದ ಹಾಗೂ ಬಾಕಿಯಿರುವ ಪ್ರಕರಣಗಳೆಷ್ಟು; (ಕಳೆದ ೪ ವರ್ಷಗಳ ಇಲಾಖಾವಾರು ಮಾಹಿತಿ ಒದಗಿಸುವುದು)

(ಇ) ಕಳೆದ ೪ ವರ್ಷಗಳಲ್ಲಿ ರಾಜ್ಯದ ವಿವಿಧ ಇಲಾಖೆಯಲ್ಲಿನ ಅಧಿಕಾರಿ, ನೌಕರರ ವಿರುದ್ಧ ಎಷ್ಟು ಪ್ರಕರಣಗಳನ್ನು ಲೋಕಾಯುಕ್ತ ಮತ್ತು ಎ.ಸಿ.ಬಿ ತನಿಖಾ ಸಂಸ್ಥೆಗೆ ವಹಿಸಲಾಗಿದೆ;

(ಈ) ಅನೇಕ ಪ್ರಕರಣಗಳಲ್ಲಿ ಇಲಾಖೆಯ ಆಡಳಿತ ಮತ್ತು ಕಾರ್ಯವೈಖರಿ ಮಾಹಿತಿಯಿಲ್ಲದೇ ತನಿಖಾ ಸಂಸ್ಥೆಗಳು ಅಗತ್ಯ ಸಾಕ್ಷ್ಯಗಳ ಕೊರತೆ ಇರುವಾಗಲು ತನಿಖೆಯ ಹೆಸರಿನಲ್ಲಿ ಕಿರುಕುಳ ನೀಡುತ್ತಿರುವುದು, ಗುರುತರವಾದ ಗಂಭೀರ ಲೋಪಗಳಿಲ್ಲದಿದ್ದರೂ, ಸೇವೆಯಿಂದ ವಜಾದಂತಹ ಶಿಕ್ಷೆ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ತನಿಖೆಗೆ ಅನುಮತಿಯನ್ನು ಶೀಘ್ರದಲ್ಲಿ ನೀಡಲು ಮತ್ತು ಕಾಲಮಿತಿಯಲ್ಲಿ ತನಿಖೆ ಮುಗಿಸಲು, ತನಿಖೆ ವೇಳೆ ಆಯಾ ಇಲಾಖೆಯ ಆಡಳಿತಾತ್ಮಕ ವಿಷಯದ ಕುರಿತು ಇಲಾಖೆಯ ಸಹಯೋಗದೊಂದಿಗೆ ತನಿಖೆ ನಡೆಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೇ; ಸರ್ಕಾರದ ನಿಲುವೇನು?

## ರಾಜ್ಯದಲ್ಲಿರುವ ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿಯಾಗಿ, ಪೌರಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂ ಮಾಡುವ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೩ (೯೬೧) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹಾಲಿ, ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿ/ನಿಗದಿತ ವೇತನ/ ಹೊರಗುತ್ತಿಗೆ ಆಧಾರದ ಮೇಲೆ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಈ ಬಗ್ಗೆ ದಿನಗೂಲಿ/ನಿಗದಿತ ವೇತನ/ ಹೊರಗುತ್ತಿಗೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ಎಂಬುದನ್ನು ಪ್ರತ್ಯೇಕವಾಗಿ ಜಿಲ್ಲಾವಾರು, ಸ್ಥಳೀಯ ಸಂಸ್ಥೆವಾರು ಮಾಹಿತಿ ನೀಡುವುದು;

(ಇ) ದಿನಗೂಲಿ, ನಿಗದಿತ ವೇತನದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನು ಖಾಯಂಗೊಳಿಸಲು ಸರ್ಕಾರ ಯಾವ ಯಾವ ಕ್ರಮವನ್ನು ತೆಗೆದುಕೊಂಡಿದೆ; (ವಿವರ ನೀಡುವುದು)

(ಈ) ಈ ನೌಕರರನ್ನು ಖಾಯಂಗೊಳಿಸಲು ವಿಶೇಷ ಸೇವಾ ನಿಯಮವನ್ನು ರೂಪಿಸಿದೆಯೇ; ಹಾಗಿದ್ದಲ್ಲಿ, ಇಲ್ಲಿಯ ತನಕ ಯಾವ ಯಾವ ರೀತಿಯ ವಿಶೇಷ ಸೇವಾ ನಿಯಮಗಳನ್ನು ರೂಪಿಸಲಾಗಿದೆ ಎಂಬ ಬಗ್ಗೆ ಸರ್ಕಾರದ ಆದೇಶ/ಅಧಿಸೂಚನೆ/ಸುತ್ತೋಲೆಗಳ ಪ್ರತಿಯನ್ನು ಒದಗಿಸುವುದು;

(ಉ) ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸುವಾಗ ಕಸ ಗುಡಿಸುವವರನ್ನು ಮಾತ್ರ ಪರಿಗಣಿಸಿ, ಲೋಡರ್ಸ್/ಕ್ಲೀನರ್ಸ್‌ಗಳನ್ನು ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ; ಬಂದಿದ್ದಲ್ಲಿ, ಈ ಬಗ್ಗೆ ವಿವರ ನೀಡುವುದು;

(ಊ) ಈ ಪೌರಕಾರ್ಮಿಕರನ್ನು ಖಾಯಂಗೊಳಿಸುವಾಗ ರೋಸ್ಟರ್ ಪದ್ಧತಿಯನ್ನು ಜಾರಿಗೆ ತರಲಾಗಿದೆಯೇ; ಅಂಗವಿಕಲರಿಗೆ ರೋಸ್ಟರ್, ಪದ್ಧತಿಯಲ್ಲಿ ಮೀಸಲಾತಿ ನೀಡಿದ್ದಲ್ಲಿ, ಈ ಅಂಗವಿಕಲ ನೌಕರರಿಗೆ ಕಸ ಗುಡಿಸಲು, ಕಸ ಎತ್ತಿ ಲಾರಿಗೆ ಹಾಕಲು ಸಾಧ್ಯವೇ; (ವಿವರ ನೀಡುವುದು)

(ಋ) ಈ ಪೌರಕಾರ್ಮಿಕರನ್ನು ಖಾಯಂಗೊಳಿಸುವಾಗ ಈ ಅವೈಜ್ಞಾನಿಕ ರೋಸ್ಟರ್ ಪದ್ಧತಿಯನ್ನು ಕೈಬಿಡಲಾಗುವುದೇ; ಈ ಬಗ್ಗೆ ಸರ್ಕಾರದ ನಿಲುವೇನು;

(ಎ) ಈ ದಿನಗೂಲಿ ಪೌರಕಾರ್ಮಿಕರನ್ನು ಯಾವ ಕಾಲಮಿತಿಯೊಳಗೆ ಖಾಯಂ ಮಾಡಿಕೊಳ್ಳಲಾಗುವುದು?

## ಪೊಲೀಸ್ ಸಿಬ್ಬಂದಿಗಳಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೪ (೯೬೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಪೊಲೀಸ್ ಸಿಬ್ಬಂದಿ ವರ್ಗದವರಿಗೆ ಇಲ್ಲಿಯತನಕ ಎಷ್ಟು ವಸತಿ ಗೃಹಗಳನ್ನು ಕಟ್ಟಿಕೊಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಹಿಂದೆ ನಿರ್ಮಿಸಿದ ವಸತಿ ಗೃಹಗಳು ಶಿಥಿಲಗೊಂಡಿದ್ದು, ಬೀಳುವ ಸ್ಥಿತಿಯಲ್ಲಿರುವ ವಸತಿ ಗೃಹಗಳನ್ನು ದುರಸ್ಥಿ ಅಥವಾ ಹೊಸದಾಗಿ ಅದೇ ಸ್ಥಳದಲ್ಲಿ ನಿರ್ಮಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ; ಹಾಗಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಿವರ ನೀಡುವುದು;

(ಇ) ಇತ್ತೀಚೆಗೆ ಹೊಸದಾಗಿ ಪೊಲೀಸ್‌ನವರಿಗೆ ನಿರ್ಮಿಸಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು; ಇವುಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಇತ್ತೀಚೆಗೆ ಸೇರಿದ ಪೊಲೀಸ್‌ನವರಿಗೆ ಹೊಸ ಪಿಂಚಣಿ ಯೋಜನೆ (ಎನ್.ಪಿ.ಎಸ್) ಯಡಿಯಲ್ಲಿ ಅವರಿಗೆ ಕಷ್ಟಕಾಲದಲ್ಲಿ ಸಾಲ ನೀಡಲು ಇರುವ ತೊಂದರೆ ಏನು; (ವಿವರ ನೀಡುವುದು)

(ಉ) ಪಿಂಚಣಿ ಯೋಜನೆಯಡಿ ಇವರಿಗೆ ಸಾಲ ನೀಡಲು ಸರ್ಕಾರ ಕೂಡಲೇ ಕ್ರಮ ವಹಿಸುವುದೇ;

(ಊ) ರಾಜ್ಯ ಸರ್ಕಾರ ಇತರೆ ಇಲಾಖೆಯ ನೌಕರರಿಗೆ ಬ್ಯಾಂಕುಗಳಲ್ಲಿ ಸಾಲ ನೀಡಿದಂತೆ, ಪೊಲೀಸ್‌ನವರಿಗೆ ಅವರ ವೇತನದ ಮೇಲೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ರಾಷ್ಟ್ರೀಕೃತ ಮತ್ತು ಶೆಡ್ಯೂಲ್ ಬ್ಯಾಂಕ್‌ಗಳಲ್ಲಿ ಸಾಲ ನೀಡದಿರಲು ಕಾರಣವೇನು; (ವಿವರ ನೀಡುವುದು) ಹಾಗಿದ್ದಲ್ಲಿ, ಅವರ ವೇತನ ಮೇಲೆ ಬ್ಯಾಂಕುಗಳಲ್ಲಿ ಸಾಲ ನೀಡುವಂತೆ ಮಾಡಲು ಸರ್ಕಾರ ತಕ್ಷಣವೇ ಕ್ರಮ ಕೈಗೊಳ್ಳುವುದೇ;

(ಋ) ದೇಶ ಕಾಯುವ ಸೈನಿಕರ ಮಕ್ಕಳಿಗೆ ಉನ್ನತ ವ್ಯಾಸಂಗದ ಸೀಟುಗಳು/ ನೌಕರಿಯಲ್ಲಿ ಶೇಕಡಾವಾರು ಸೀಟುಗಳನ್ನು ನೀಡಿದಂತೆ, ರಾಜ್ಯ ಕಾಯುವ ಪೊಲೀಸ್‌ನವರ ಮಕ್ಕಳಿಗೂ ಉನ್ನತ ವ್ಯಾಸಂಗದ ಸೀಟುಗಳು, ನೌಕರಿಯಲ್ಲಿ ಶೇಕಡವಾರು ಸೀಟುಗಳನ್ನು ಕಾಯ್ದಿರಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

## ರಾಜ್ಯ ಸರ್ಕಾರದಲ್ಲಿರುವ ಒಟ್ಟು ಇಲಾಖೆಗಳು ಮತ್ತು ಸರ್ಕಾರಿ ವಾಹನಗಳ ಸಂಖ್ಯೆ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೫ (೯೩೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರದಲ್ಲಿರುವ ಒಟ್ಟು ಇಲಾಖೆಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)

(ಆ) ಈ ಇಲಾಖೆಗಳಲ್ಲಿ ಬಳಕೆಯಲ್ಲಿರುವ ವಾಹನಗಳ ಒಟ್ಟು ಸಂಖ್ಯೆ ಎಷ್ಟು; (ಎಲ್ಲಾ ತರದ ವಾಹನಗಳು) ಈ ಬಗ್ಗೆ ರಾಜ್ಯ ಮಟ್ಟದಲ್ಲಿ/

ವಿಭಾಗ ಮಟ್ಟದಲ್ಲಿ/ಜಿಲ್ಲಾ ಮಟ್ಟದಲ್ಲಿ/ತಾಲ್ಲೂಕು ಮಟ್ಟದಲ್ಲಿ/ಹೋಬಳಿ ಮಟ್ಟದಲ್ಲಿ ಬಳಕೆಯಲ್ಲಿರುವ ವಾಹನಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಮಾಹಿತಿ ನೀಡುವುದು;

(ಇ) ಈ ವಾಹನಗಳಿಗೆ ವರ್ಷಕ್ಕೆ ಎಷ್ಟು ಲೀಟರ್ ಡೀಸೆಲ್/ಪೆಟ್ರೋಲ್ ಉಪಯೋಗಿಸಲಾಗುತ್ತಿದೆ ಹಾಗೂ ಇದಕ್ಕಾಗಿ ಎಷ್ಟು ಹಣ ಖರ್ಚಾಗುತ್ತಿದೆ; ಮಾಹಿತಿ ನೀಡುವುದು;

(ಈ) ರಾಜ್ಯದಲ್ಲಿ ಬಳಕೆಯಲ್ಲಿರುವ ಒಟ್ಟು ವಾಹನಗಳಿಗೆ ರಿಪೇರಿಗಾಗಿ ವರ್ಷಕ್ಕೆ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ; ಮಾಹಿತಿ ನೀಡುವುದು;

(ಉ) ಆರೋಗ್ಯ/ಪೊಲೀಸ್/ಅಗ್ನಿ ಶಾಮಕ/ಇನ್ನಿತರೆ ತುರ್ತು ಸೇವೆ ಅಗತ್ಯ ಇಲಾಖೆಯ ವಾಹನಗಳನ್ನು ಹೊರತುಪಡಿಸಿ ಹಾಗೂ ರಾಜ್ಯದ/ ವಿಭಾಗದ/ಜಿಲ್ಲಾ ಮಟ್ಟದ ನಂಬರ್ ೧ನೇ ಸ್ಥಾನದಲ್ಲಿರುವ ಅಧಿಕಾರಿಗಳಿಗೆ ನೀಡಿರುವ ವಾಹನಗಳನ್ನು ಹೊರತುಪಡಿಸಿ, ಉಳಿದಿರುವ ಇತರೆ ಅಧಿಕಾರಿಗಳಿಗೆ ಈಗಿನ ನಿಯಮದಂತೆ ಬಾಡಿಗೆ ವಾಹನ ಸೌಲಭ್ಯವನ್ನು ಒದಗಿಸಿದಲ್ಲಿ, ಎಷ್ಟು ಮೊತ್ತದ ಹಣ ಬೇಕಾಗಬಹುದು; (ಮಾಹಿತಿಯನ್ನು ನೀಡುವುದು)

(ಊ) ಇದರಿಂದ ಸರ್ಕಾರಕ್ಕೆ ರಿಪೇರಿ/ಡೀಸೆಲ್/ಪೆಟ್ರೋಲ್‌ಗೆ ಖರ್ಚಾಗುವ ಹಣ ಉಳಿತಾಯವಾಗುವುದಿಲ್ಲವೆ; ಈ ಬಗ್ಗೆ ಸರ್ಕಾರದ ನಿಲುವೇನು?

## ೨೦೧೭-೧೮ನೇ ಸಾಲಿನಲ್ಲಿ ಹಜ್ ಯಾತ್ರೆ ಕೈಗೊಳ್ಳುವ ಬಗ್ಗೆ ಬಂದ ಅರ್ಜಿಗಳ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೬ (೯೨೯) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭–೧೮ನೇ ಸಾಲಿನಲ್ಲಿ ರಾಜ್ಯದಿಂದ ಹಜ್ ಯಾತ್ರೆಯನ್ನು ಕೈಗೊಳ್ಳಲು ಬಂದ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಬಂದಿದ್ದ ಅರ್ಜಿಗಳಲ್ಲಿ ಎಷ್ಟು ಜನ ಯಾತ್ರಾರ್ಥಿಗಳಿಗೆ ಅವಕಾಶ ಮಾಡಿಕೊಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಬಾಕಿ ಉಳಿದ ಯಾತ್ರಾರ್ಥಿಗಳಿಗೆ ಸದರಿ ಯಾತ್ರೆಯನ್ನು ಕೈಗೊಳ್ಳಲು ಯಾವಾಗ ಅವಕಾಶ ನೀಡಲಾಗುವುದು; (ವಿವರ ನೀಡುವುದು)

(ಈ) ಈ ಯಾತ್ರೆಗಾಗಿ ರಾಜ್ಯ ಸರ್ಕಾರ ಖರ್ಚು ಮಾಡುತ್ತಿರುವ ಹಣವೆಷ್ಟು; (ವಿವರ ನೀಡುವುದು)

(ಉ) ತುಮಕೂರು ಜಿಲ್ಲೆಯಿಂದ ೨೦೧೭–೧೮ನೇ ಸಾಲಿನಲ್ಲಿ ಹಜ್ ಯಾತ್ರೆಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಊ) ಬಂದ ಅರ್ಜಿಗಳಲ್ಲಿ ಈ ಜಿಲ್ಲೆಯ ಎಷ್ಟು ಜನ ಹಜ್ ಯಾತ್ರಾರ್ಥಿಗಳನ್ನು ಹಜ್ ಯಾತ್ರೆಗೆ ಕಳುಹಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) ಇನ್ನುಳಿದ ಯಾತ್ರಾರ್ಥಿಗಳನ್ನು ಹಜ್ ಯಾತ್ರೆಗೆ ಯಾವಾಗ ಕಳುಹಿಸಿಕೊಡಲಾಗುವುದು; (ಮಾಹಿತಿ ಒದಗಿಸುವುದು)

(ಋ) ಈ ಜಿಲ್ಲೆಯ ಹಜ್ ಯಾತ್ರಿಗಳಿಗೆ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು? (ವಿವರ ನೀಡುವುದು)

## ರಾಜ್ಯದಲ್ಲಿ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೭ (೧೦೪೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಹಾಡು ಹಗಲೇ ಕೊಲೆ, ಸುಲಿಗೆ, ಮಹಿಳೆಯರ ಮೇಲಿನ ದೌರ್ಜನ್ಯದಂತ ಪ್ರಕರಣಗಳು ಜರುಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಅಪರಾಧಗಳ ಪ್ರಕರಣಗಳ ನಿಯಂತ್ರಣಕ್ಕೆ ಹಾಗೂ ಸಾರ್ವಜನಿಕರ ರಕ್ಷಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು; ಗಂಭೀರ ಸ್ವರೂಪದ ಅಪರಾಧಗಳ ತಡೆಗೆ ಸರ್ಕಾರ ತೆಗೆದುಕೊಂಡ ಮುಂಜಾಗ್ರತಾ ಕ್ರಮಗಳೇನು; (ವಿವರ ನೀಡುವುದು)

(ಇ) ಸನ್ ೨೦೧೫–೧೬, ೨೦೧೬–೧೭, ೨೦೧೭–೧೮ನೇ ಸಾಲಿನಲ್ಲಿ ರಾಜ್ಯದಲ್ಲಿ ದಾಖಲಾದ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಮಕ್ಕಳ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳೆಷ್ಟು; ಗಂಭೀರ ಸ್ವರೂಪದ ಕೊಲೆ ಪ್ರಯತ್ನಗಳೆಷ್ಟು ಹಾಗೂ ಪ್ರಕರಣಗಳೆಷ್ಟು;

(ಈ) ಸನ್ ೨೦೧೫–೧೬, ೨೦೧೬–೧೭, ೨೦೧೭–೧೮ನೇ ಸಾಲಿಗೆ ರಾಜ್ಯದಲ್ಲಿ ಒಟ್ಟು ನಡೆದ ಕೊಲೆಯ ಪ್ರಕರಣಗಳ ಸಂಖ್ಯೆ ಎಷ್ಟು; ಇದರಲ್ಲಿ ಹಿಂದುಗಳೆಷ್ಟು, ಮುಸ್ಲಿಂ ಜನಾಂಗದವರೆಷ್ಟು, ರಾಜಕೀಯ ಮತ್ಸರ, ಕೋಮುವಾದದ ಹಿನ್ನಲೆ, ವೈಯಕ್ತಿಕ ವಿಷಯ ಸೇರಿದಂತೆ ವಿವರ ನೀಡುವುದು;

(ಉ) ಇವುಗಳ ತನಿಖೆಯು ಯಾವ ಹಂತದಲ್ಲಿವೆ; ಎಷ್ಟು ಕೊಲೆ ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ? (ವಿವರ ನೀಡುವುದು)

## ಸರಣಿ ಭಾಗ್ಯಗಳ ಯೋಜನೇತರ ದುಂದುವೆಚ್ಚದಿಂದ ರಾಜ್ಯದ ಸಾಲದ ಹೊರೆ ದುಪ್ಪಟ್ಟಾಗಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೬೮ (೧೦೪೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರವು ಸರಣಿ ಭಾಗ್ಯಗಳ ಯೋಜನೇತರ ಯೋಜನೆಗಳ ದುಂದುವೆಚ್ಚದಿಂದ ರಾಜ್ಯದ ಸಾಲದ ಹೊರೆ ದುಪ್ಪಟ್ಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ವಿತ್ತೀಯ ಕೊರತೆಯನ್ನು ತಗ್ಗಿಸಿ, ಸಾಲದ ಋಣಭಾರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಏನು ಕ್ರಮಗಳನ್ನು ಕೈಗೊಳ್ಳುವುದು;

(ಇ) ೨೦೧೨–೧೩ನೇ ಸಾಲಿನಲ್ಲಿ ರಾಜ್ಯ ಸರ್ಕಾರದಲ್ಲಿದ್ದ ವಿತ್ತೀಯ ಕೊರತೆಯೆಷ್ಟು; ೨೦೧೨–೧೩ನೇ ಸಾಲಿನಲ್ಲಿ ರಾಜ್ಯದ ಮೇಲೆ ಎಷ್ಟು ಮೊತ್ತದ ಸಾಲವಿತ್ತು; ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ಸಾಲ ಪಡೆಯಲಾಗಿತ್ತು; (ವಿವರ ನೀಡುವುದು)

(ಈ) ಸನ್ ೨೦೧೭–೧೮ನೇ ಡಿಸೆಂಬರ್‌ವರೆಗೆ ಕಂಡುಬಂದ ವಿತ್ತೀಯ ಕೊರತೆಯೆಷ್ಟು; ಪ್ರಸ್ತುತ ೨೦೧೭–೧೮ರ ಡಿಸೆಂಬರ್‌ವರೆಗೆ ರಾಜ್ಯದ ಮೇಲೆ ಇರುವ ಒಟ್ಟು ಸಾಲದ ಮೊತ್ತವೆಷ್ಟು; ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ಸಾಲವನ್ನು ಪಡೆಯಲಾಗಿದೆ; (ವಿವರ ನೀಡುವುದು)

(ಉ) ೨೦೧೭-೧೮ರಲ್ಲಿ ಎಷ್ಟು ಮೊತ್ತದ ಆದಾಯ ಸಂಗ್ರಹ ನಿರೀಕ್ಷಿಸಲಾಗಿತ್ತು; ಸಂಗ್ರಹವಾದ ಆದಾಯವೆಷ್ಟು; ರಾಜ್ಯದ ಪ್ರತಿ ಪ್ರಜೆಯ ಮೇಲಿನ ಸಾಲದ ಹೊರೆ ಎಷ್ಟು?

## ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆಯ ಅನುದಾನ ಬಳಕೆಯಾಗದೆ ಕೊಳೆಯುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೭೬೯ (೧೦೩೯) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಸ್ಮಾರ್ಟ್ ಸಿಟಿ ಯೋಜನೆಯ ಅನುದಾನವು ರಾಜ್ಯದಲ್ಲಿ ಬಳಕೆಯಾಗದೆ ಕೊಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅನುಷ್ಠಾನವಾಗದೆ ಇರಲು ಕಾರಣವೇನು;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನವು ವಿಳಂಬವಾಗಲು ಕಾರಣಗಳೇನು;

(ಇ) ಕೇಂದ್ರ ಸರ್ಕಾರದ ಯೋಜನೆಯಾದ ಸ್ಮಾರ್ಟ್ ಸಿಟಿ ಯೋಜನೆಯಡಿ ರಾಜ್ಯದ ಎಷ್ಟು ನಗರಗಳನ್ನು ಆಯ್ಕೆ ಮಾಡಲಾಗಿತ್ತು; ಅವು ಯಾವುವು;

(ಈ) ಕೇಂದ್ರ ಸರ್ಕಾರದಿಂದ ಸ್ಮಾರ್ಟ್ ಸಿಟಿ ಯೋಜನೆಯಡಿ ರಾಜ್ಯಕ್ಕೆ ಒಟ್ಟು ಎಷ್ಟು ಅನುದಾನ ಬಿಡುಗಡೆಯಾಗಿದೆ; ಅದರಲ್ಲಿ ಎಷ್ಟು ಅನುದಾನ ಖರ್ಚು ಮಾಡಲಾಗಿದೆ; (ನಗರವಾರು ವಿವರ ನೀಡುವುದು)

(ಉ) ಸ್ಮಾರ್ಟ್ ಸಿಟಿ ಯೋಜನೆಯಡಿ ಆಯ್ಕೆಯಾಗಿದ್ದ ಬೆಳಗಾವಿ ನಗರಕ್ಕೆ ಎಷ್ಟು ಅನುದಾನ ಬಿಡುಗಡೆಯಾಗಿದೆ; ಬೆಳಗಾವಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನಕ್ಕೆ ಕೈಗೊಂಡ ಕ್ರಮಗಳೇನು; ಯಾವ ಯಾವ ಕ್ರಿಯಾ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ? (ವಿವರ ನೀಡುವುದು)

## ನಗರದಲ್ಲಿ ಶೌಚಾಲಯದ ಕೊರತೆ ಬಗ್ಗೆ

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೭೦ (೫೪೭) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜಧಾನಿಯಲ್ಲಿ ಒಟ್ಟು ಎಷ್ಟು ಶೌಚಾಲಯಗಳಿವೆ; ಹಲವು ಕಡೆ ಶೌಚಾಲಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರಾಜಧಾನಿಯಲ್ಲಿ ಜನ ಸಂಖ್ಯೆಗನುಣವಾಗಿ ಶೌಚಾಲಯಗಳನ್ನು ನಿರ್ಮಿಸಿಲಾಗಿದೆಯೇ; ರಾಜಧಾನಿಯಲ್ಲಿ ನೈರ್ಮಲ್ಯ ಕಾಪಾಡುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ನಾಗರಿಕ ಸೌಲಭ್ಯ (ಸಿ.ಎ) ನಿವೇಶನಗಳಿಗೆ ಸಂಬಂಧಿಸಿದಂತೆ

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು):–**

೭೭೧ (೯೬೦) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಒಳಗೊಂಡಂತೆ ಸಿ.ಐ.ಟಿ.ಬಿ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಾಜ್ಯದಲ್ಲಿರುವ ಜಿಲ್ಲಾವಾರು ಅಭಿವೃದ್ಧಿ ಪ್ರಾಧಿಕಾರಗಳಿಂದ ಮತ್ತು ಗೃಹ ಮಂಡಳಿಗಳಿಂದ ನಾಗರಿಕ ಸೌಲಭ್ಯ (Civil Amenties) ದ ನಿವೇಶನಗಳನ್ನು ಭೋಗ್ಯದ (Lease) ಆಧಾರದಲ್ಲಿ ರಾಜ್ಯಾದ್ಯಂತ ಪಡೆದಿರುವ ಒಟ್ಟು ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಹೆಸರನ್ನು ಒದಗಿಸುವುದು;

(ಆ) ಅಂತಹ ಖಾಸಗಿ ಶೈಕ್ಷಣಿಕ ಸಂಸ್ಥೆಗಳಿಗೆ ನೀಡಿರುವ ನಿವೇಶನಗಳ ವಿಸ್ತೀರ್ಣವೇನು; ಮತ್ತು ಭೋಗ್ಯದ ಕಾಲವಾಧಿ ಹಾಗೂ ನಿಗದಿಪಡಿಸಿದ ನಿಯಮ ಮತ್ತು ಷರತ್ತುಗಳೇನು;

(ಇ) ಕಾಲಾವಧಿ ಪೂರ್ಣಗೊಳಿಸಿರುವಂತೆ ಶೈಕ್ಷಣಿಕ ಸಂಸ್ಥೆಗಳಿಂದ ಹಿಂಪಡೆದ ನಿವೇಶನಗಳ ಸಂಖ್ಯೆ ಎಷ್ಟು? (ಮಾಹಿತಿ ಒದಗಿಸುವುದು)

## ಬಿಡದಿ ಹೋಬಳಿ, ತಾಯಪ್ಪನದೊಡ್ಡಿ ಪೊಲೀಸ್ ಹೊರ ಠಾಣೆಯ ಬಗ್ಗೆ

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು):–**

೭೭೨ (೯೫೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಯಪ್ಪನದೊಡ್ಡಿ ಗ್ರಾಮದಿಂದ ಬಿಡದಿ ಠಾಣೆಯಲ್ಲಿ, ೨೦೧೩ ರಿಂದ ಇಲ್ಲಿಯವರೆಗೆ ದಾಖಲಾದ ದೂರುಗಳ ಸಂಖ್ಯೆ ಎಷ್ಟು; ವಿವರಣಾತ್ಮಕ ಮಾಹಿತಿ ಒದಗಿಸುವುದು; (ಪ್ರಕರಣವಾರು ದಾಖಲಾದ ದೂರುಗಳ ಪ್ರತಿ ಹಾಗೂ ದಾಖಲಾಗದ ದೂರುಗಳ ಪ್ರತಿಗಳನ್ನು ನೀಡುವುದು)

(ಆ) ತಾಯಪ್ಪನದೊಡ್ಡಿ ಗ್ರಾಮದಲ್ಲಿ, ಬಿಡದಿಯ ಈಗಿನ ಠಾಣಾಧಿಕಾರಿಯ ಅವಧಿಯಲ್ಲಿ ಕೊಲೆ ಯತ್ನ, ಅತ್ಯಾಚಾರ ಯತ್ನ, ಕಳ್ಳತನದಂತಹ ದಾಖಲಾದ ದೂರುಗಳ ಸಂಖ್ಯೆ ಎಷ್ಟು; ಈ ಹಿಂದೆ ಕಾರ್ಯನಿರ್ವಹಿಸಿದಂತಹ ಠಾಣಾಧಿಕಾರಿಗಳ ಅವಧಿಯಲ್ಲಿ ದಾಖಲಾದ ದೂರುಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾದ ಮಾಹಿತಿಯನ್ನು ಒದಗಿಸುವುದು)

(ಇ) ತಾಯಪ್ಪನದೊಡ್ಡಿ ಗ್ರಾಮದಲ್ಲಿ ಪೊಲೀಸ್ ಹೊರ ಠಾಣೆಯಿದ್ದು, ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರೂ ಪ್ರಕರಣಗಳು ಮರುಕಳಿಸುತ್ತಿದ್ದು, ಪ್ರಕರಣಗಳನ್ನು ನಿಬಾಯಿಸುವಲ್ಲಿ ವಿಫಲರಾದ ಸಿಬ್ಬಂದಿಯ ವಿರುದ್ಧ ಇಲಾಖೆಯಿಂದ ಯಾವ ಕ್ರಮ ಕೈಗೊಳ್ಳಲಾಗಿದೆ? (ಕೈಕೊಂಡ ಕ್ರಮದ ಬಗ್ಗೆ ಮಾಹಿತಿ ಒದಗಿಸುವುದು)

## ತಾಯಪ್ಪನದೊಡ್ಡಿ ಪೊಲೀಸ್ ಹೊರ ಠಾಣೆಯ ಬಗ್ಗೆ

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು):–**

೭೭೩ (೯೫೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಯಪ್ಪನದೊಡ್ಡಿ ಗ್ರಾಮದಲ್ಲಿ ಯಾವ ದಿನಾಂಕದಿಂದ ಪೊಲೀಸ್ ಹೊರ ಠಾಣೆಯನ್ನು ಕಾರ್ಯಾರಂಭ ಮಾಡಲಾಗಿದೆ;

(ಆ) ಸದರಿ ಗ್ರಾಮದ ಹೊರ ಠಾಣೆಗೆ ಒಟ್ಟು ಎಷ್ಟು ಗ್ರಾಮಗಳನ್ನು ಸೇರಿಸಲಾಗಿರುತ್ತದೆ; (ಗ್ರಾಮವಾರು ಮಾಹಿತಿ ಒದಗಿಸುವುದು)

(ಇ) ತಾಯಪ್ಪನದೊಡ್ಡಿ ಪೊಲೀಸ್ ಹೊರ ಠಾಣೆ ಕಾರ್ಯಾರಂಭಗೊಂಡ ದಿನಾಂಕದಿಂದ ಈವರೆವಿಗೂ ಕರ್ತವ್ಯಕ್ಕೆ ನಿಯೋಜಿಸಿದ ಸಿಬ್ಬಂದಿಗಳ ಹೆಸರು, ದರ್ಜೆ, ದಿನಾಂಕವಾರು ಹಾಗೂ ಪಾಳಿವಾರು ಮಾಹಿತಿಯನ್ನು ನೀಡುವುದು;

(ಈ) ಸುತ್ತಮುತ್ತಲಿನ ಜನರಿಂದ ದೂರು ದಾಖಲಿಸಲು ತಾಯಪ್ಪನದೊಡ್ಡಿಯಲ್ಲಿ ಪ್ರಾರಂಭಿಸಲಾದ ಪೊಲೀಸ್ ಹೊರ ಠಾಣೆಯಲ್ಲಿ ಅವಕಾಶ ಕಲ್ಪಿಸಲಾಗಿದೆಯೇ; ಕಲ್ಪಿಸಲಾಗದಿದ್ದಲ್ಲಿ, ಕಾರಣಗಳೇನು? (ಮಾಹಿತಿ ಒದಗಿಸುವುದು)

## ಕೊಳಚೆ ನೀರು ಸಂಸ್ಕರಣಾ ಘಟಕ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೭೭೪ (೯೮೮) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ೨೦ ಅಥವಾ ಹೆಚ್ಚಿನ

ಅಪಾರ್ಟ್‌ಮೆಂಟ್‌ಗಳ (ಗುಂಪು ಮನೆಗಳ)ನ್ನು ಹೊಂದಿರುರವರಿಗೆ ಕೊಳಚೆ ನೀರು ಸಂಸ್ಕರಣಾಘಟಕ (ಎಸ್.ಟಿ.ಪಿ) ನಿರ್ಮಿಸಬೇಕೆಂದು ಆದೇಶ ಮಾಡಿರುವುದು ನಿಜವೇ;

(ಆ) ಸದರಿ ಅಪಾರ್ಟ್‌ಮೆಂಟ್‌ಗಳಿಗೆ ಕೊಳಚೆ ನೀರು ಸಂಸ್ಕರಣಾ ಘಟಕ ಕಡ್ಡಾಯವೇ ಅಥವಾ ಐಚ್ಛಿಕವೇ; (ವಿವರವಾದ ಆದೇಶದೊಂದಿಗೆ ಮಾಹಿತಿ ನೀಡುವುದು)

(ಇ) ದಿನಾಂಕ: ೨೫-೦೨-೨೦೧೬ಕ್ಕೆ ಮೊದಲು ಕಟ್ಟಡವನ್ನು ಕಟ್ಟುವಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ನೀರು ಸರಬರಾಜು ಮಂಡಳಿ ಪರವಾನಿಗೆ ನೀಡುವಾಗ ಮಾಲೀಕರಿಗೆ ಕೊಳಚೆ ನೀರು ಸಂಸ್ಕರಣಾ ಘಟಕ ಸ್ಥಾಪಿಸುವುದು ಕಡ್ಡಾಯ ಎಂದು ಅಧಿಕೃತವಾಗಿ ತಿಳಿಸಲಾಗಿತ್ತೇ;

(ಈ) ಒಂದು ಸಲ ಪರವಾನಗಿಯ ನಿಯಮಗಳಂತೆಯೇ ಕಟ್ಟಡವನ್ನು ನಿರ್ಮಿಸಿದ ಮೇಲೆ ಅನಗತ್ಯವಾಗಿ ಜಾರಿಗೆ ತರಲಾಗದ ಆದೇಶ ನೀಡಿ ಈ ಮನೆಗಳ ನಿವಾಸಿಗಳಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಇಂತಹ ಅವೈಜ್ಞಾನಿಕ ಆದೇಶದಿಂದ ದಂಡದ ರೂಪದಲ್ಲಿ ವಸೂಲಾದ ಹಣವನ್ನು ವಾಪಸ್ಸು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಶಾಲಾ ವಾಹನಗಳ ಅಪಘಾತಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೭೫ (೯೮೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು  ನಗರ ಜಿಲ್ಲೆಯಲ್ಲಿ ಶಾಲಾ ವಾಹನಗಳು ಅಪಘಾತಕ್ಕೆ ಒಳಗಾಗಿರುವ ಪ್ರಕರಣಗಳೆಷ್ಟು; (೨೦೧೫ ರಿಂದ ಇಲ್ಲಿಯವರೆಗೆ ಮಾಹಿತಿ ನೀಡುವುದು)

(ಆ) ಸದರಿ ಪ್ರಕರಣಗಳಲ್ಲಿ ಗಾಯಗೊಂಡ, ಮೃತರಾದ ಮಕ್ಕಳ ಸಂಖ್ಯೆಯೆಷ್ಟು;

(ಇ) ಶಾಲಾ ವಾಹನಗಳ ಚಾಲಕರು ಮದ್ಯಪಾನ ಮಾಡಿ, ವಾಹನ ಚಲಾಯಿಸುತ್ತಿರುವುದು ಸಂಚಾರಿ ಸಿಬ್ಬಂದಿಯ ತಪಾಸಣೆಯ ಸಮಯದಲ್ಲಿ ಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ಅಂತಹ ಚಾಲಕರು ಮತ್ತು ಸಂಬಂಧಿಸಿದ ಶೈಕ್ಷಣಿಕ ಸಂಸ್ಥೆಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಅನುದಾನದ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೭೭೬ (೯೮೬) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರದಿಂದ ಕಳೆದ ೨ ವರ್ಷಗಳಲ್ಲಿ ಅಭಿವೃದ್ಧಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಿಡುಗಡೆಯಾದ ಹಣವೆಷ್ಟು; (ವರ್ಷಾವಾರು ವಿವರ ನೀಡುವುದು)

(ಆ) ಬಿಡುಗಡೆಯಾದ ಹಣದಲ್ಲಿ ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿದೆ ; (ವಿವರ ನೀಡುವುದು)

(ಇ) ಪೂರ್ಣಗೊಳ್ಳದೆ ಬಾಕಿ ಇರುವ ಕಾಮಗಾರಿಗಳಾವುವು ; ಇವುಗಳನ್ನು ಎಷ್ಟು ಕಾಲಮಿತಿಯೊಳಗೆ ಪೂರ್ಣಗೊಳಿಸ–ಲಾಗುವುದು ; (ವಿವರ ನೀಡುವುದು)

(ಈ) ಈ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿರುವುದು ನಿಜವೇ ; ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮಕೈಗೊಂಡಿದೆ ; ತಪ್ಪಿತಸ್ಥ ಅಧಿಕಾರಿಗಳ ವಿವರ ನೀಡುವುದು?

## ಕನ್ನಡ ಶೀಘ್ರಲಿಪಿಗಾರರ ನೇಮಕಾತಿ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೭೭ (೧೦೨೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕನ್ನಡವನ್ನು ಸಂಪೂರ್ಣವಾಗಿ ಆಡಳಿತ ಭಾಷೆಯಾಗಿ ಎಲ್ಲಾ ಹಂತಗಳಲ್ಲೂ ಜಾರಿಗೆ ತರಬೇಕೆಂಬುದು ಸರ್ಕಾರದ ಉದ್ದೇಶ–ವಲ್ಲವೇ;

(ಆ) ಕನ್ನಡ ಶೀಘ್ರಲಿಪಿಗಾರರನ್ನು ರಾಜ್ಯ ಸರ್ಕಾರ ಎಲ್ಲಾ ಇಲಾಖೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡದಿರಲು ಕಾರಣವೇನು;

(ಇ) ಕನ್ನಡ ಶೀಘ್ರಲಿಪಿಗಾರರ ನೇಮಕಾತಿಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ; ಎಷ್ಟು ದಿವಸಗಳಲ್ಲಿ ಈ ಪ್ರಕ್ರಿಯೆ ಪ್ರಾರಂಭವಾಗುತ್ತದೆ?

## ನಾಪತ್ತೆಯಾದ ಪ್ರಕರಣಗಳ ಬಗ್ಗೆ

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೭೭೮ (೧೦೦೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಯುವಕ, ಯುವತಿ ಹಾಗೂ ಮಕ್ಕಳ ನಾಪತ್ತೆ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ೨೦೦೮-೦೯ ರಿಂದ ೨೦೧೭-೧೮ನೇ ಸಾಲಿನವರೆಗೆ ದಾಖಲಾಗಿರುವ ನಾಪತ್ತೆ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ಆ ಪೈಕಿ ಪತ್ತೆಯಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಪತ್ತೆಯಾಗದ ಪ್ರಕರಣಗಳ ಸಂಖ್ಯೆ ಎಷ್ಟು ? (ವಿವರವನ್ನು ವರ್ಷಾವಾರು, ಗಂಡು, ಹೆಣ್ಣು ಮತ್ತು ಮಕ್ಕಳ ಸಂಖ್ಯೆ ಸಹಿತ ನೀಡುವುದು)

## ರಾಜ್ಯ ಸರ್ಕಾರ ಮಾಡಿರುವ ಸಾಲದ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೭೯ (೧೦೦೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರ ವಿವಿಧ ಸಂಘ-ಸಂಸ್ಥೆ, ಬ್ಯಾಂಕ್ ಹಾಗೂ ಇತರೆ ಮೂಲಗಳಿಂದ ಸಾಲ ಪಡೆದಿರುವುದು ನಿಜವೇ;

(ಆ) ಹಾಗಿದ್ದರೆ, ೨೦೦೮-೦೯ ರಿಂದ ೨೦೧೭-೧೮ನೇ ಸಾಲಿನ ವರೆಗೆ ಸರ್ಕಾರ ಮಾಡಿರುವ / ಪಡೆದಿರುವ ಸಾಲದ ಮೊತ್ತ ಎಷ್ಟು ; ಸರ್ಕಾರಿ ಕಟ್ಟಡಗಳ ಅಡಮಾನ ಸಾಲ ಎಷ್ಟು ; ಮಾಡಿರುವ/ ಪಡೆದಿರುವ ಸಾಲಕ್ಕೆ ಬಡ್ಡಿ ಹಣ ಎಷ್ಟು ; ವರ್ಷಾವಾರು, ಸ್ಥಳೀಯ ಸಂಸ್ಥೆವಾರು (ಬಿಡಿಎ, ಬಿಬಿಎಂಪಿ ಹಾಗೂ ಇತರೆ) ಸಂಪೂರ್ಣ ವಿವರ ನೀಡುವುದು;

(ಇ) ಸರ್ಕಾರ ಯಾವ ಉದ್ದೇಶಕ್ಕೆ ಈ ಸಾಲಗಳನ್ನು ಮಾಡಲಾಗಿದೆ ; ಮಾಡಿದ್ದ ಸಾಲವನ್ನು ತೀರಿಸಲಾಗಿದೆಯೇ ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳ ಬಗ್ಗೆ

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೮೦ (೧೦೦೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ೨೦೦೮–೦೯ ರಿಂದ ೨೦೧೭–೧೮ನೇ ಸಾಲಿನವರೆಗೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದು ನಿಜವೇ;

(ಆ) ಹಾಗಿದ್ದರೆ, ಇದುವರೆವಿಗೆ ಎಷ್ಟು ಕ್ರಿಮಿನಲ್ ಪ್ರಕರಣಗಳು ರಾಜ್ಯಾದ್ಯಂತ ದಾಖಲಾಗಿವೆ ; ದಾಖಲಾದ ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸರು ಇತ್ಯರ್ಥವಾದ / ಬೇಧಿಸಿದ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ ಎಷ್ಟು ; ಬಾಕಿ ಎಷ್ಟು ? (ವಿವರವನ್ನು ವರ್ಷಾವಾರು ಮತ್ತು ಜಿಲ್ಲಾವಾರು ಕ್ರಿಮಿನಲ್ ಪ್ರಕರಣಗಳ ಸಂಖ್ಯೆ ಸಹಿತ ನೀಡುವುದು)

## ಅಧಿಕಾರಿಗಳ ಮೇಲೆ ಹಲ್ಲೆಯಾದ ಪ್ರಕರಣಗಳ ಬಗ್ಗೆ

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೮೧ (೧೦೦೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ೨೦೦೮–೦೯ ರಿಂದ ೨೦೧೭–೧೮ನೇ ಸಾಲಿನವರೆಗೆ ಕರ್ತವ್ಯ ನಿರತ ವಿವಿಧ ಇಲಾಖೆ ಅಧಿಕಾರಿಗಳು ಸೇರಿದಂತೆ ಪೊಲೀಸ್ ಅಧಿಕಾರಗಳ ಮೇಲೆ ಹಲ್ಲೆ ಪ್ರಕರಣಗಳು ನಡೆದಿರುವುದು ನಿಜವೇ;

(ಆ) ಹಾಗಿದ್ದರೆ, ಇದುವರೆವಿಗೆ ಎಷ್ಟು ಕರ್ತವ್ಯ ನಿರತ ಅಧಿಕಾರಿಗಳು ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಲ್ಲೆಗೆ ಒಳಗಾಗಿದ್ದಾರೆ ? (ವಿವರವನ್ನು ವರ್ಷಾವಾರು, ಹಲ್ಲೆಗೆ ಒಳಗಾದ ಅಧಿಕಾರಿಗಳ ಸಂಖ್ಯೆ ಸಹಿತ ನೀಡುವುದು)

## "ಸ್ಮಾರ್ಟ್ ಸಿಟಿ" ಯೋಜನೆಯ ಬಗ್ಗೆ

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)**

೭೮೨ (೧೦೦೦) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) "ಸ್ಮಾರ್ಟ್ ಸಿಟಿ" ಯೋಜನೆಗೆ ಕೇಂದ್ರ ಸರ್ಕಾರ ಅನುದಾನ ನೀಡುತ್ತಿರುವುದು ನಿಜವೇ;

(ಆ) ಹಾಗಿದ್ದರೆ, ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಆಯ್ಕೆಯಾದ ಜಿಲ್ಲೆಗಳು ಯಾವುದು; (ವಿವರ ನೀಡುವುದು)

(ಇ) ಸ್ಮಾರ್ಟ್ ಸಿಟಿ ಯೋಜನೆಗೆ ಪ್ರಾರಂಭದಿಂದ ಆಯ್ಕೆಯಾದ ಜಿಲ್ಲೆಗಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು; ಖರ್ಚು ಮಾಡಿದ ಹಣ ಎಷ್ಟು ; ಬಾಕಿ ಎಷ್ಟು ; ಈ ಯೋಜನೆಗೆ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ವಾರಾಹಿ ನದಿಯಿಂದ ಉಡುಪಿ ನಗರಕ್ಕೆ ಕುಡಿಯುವ ನೀರು ಪೂರೈಕೆ ಯೋಜನೆಯಲ್ಲಿ ಭೂ ಸ್ವಾಧೀನದ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೮೩ (೧೦೨೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಾರಾಹಿ ನದಿಯಿಂದ ಉಡುಪಿ ನಗರಕ್ಕೆ ಕುಡಿಯುವ ನೀರು ಪೂರೈಕೆ ಯೋಜನೆಯಲ್ಲಿ ಪೈಪ್‌ಲೈನ್ ಮುಖಾಂತರ ನೀರನ್ನು ಕೊಂಡೊಯ್ದು ಸುವರ್ಣ ನದಿಗೆ ಹರಿಸುವ ಉದ್ದೇಶವೇನು;

ಈ ಯೋಜನೆಗಾಗಿ ವಾರಾಹಿ ನದಿಯಿಂದ ಪಡೆಯುವ ನೀರಿನ ಪ್ರಮಾಣವೆಷ್ಟು ; ಶುದ್ಧೀಕರಿಸಿದ ನಂತರ ಲಭ್ಯವಾಗುವ ನೀರಿನ ಪ್ರಮಾಣವೆಷ್ಟು ;

(ಆ) ಈ ಯೋಜನೆ ಅನುಷ್ಠಾನಕ್ಕಾಗಿ ಎಷ್ಟು ಭೂಮಿಯ ಅವಶ್ಯಕತೆ ಇದೆ ; ಇದರಲ್ಲಿ ಅವಶ್ಯಕತೆ ಇರುವ ಕಂದಾಯ ಇಲಾಖೆಯ ಭೂಮಿ ಎಷ್ಟು ; ಅವಶ್ಯಕತೆ ಇರುವ ಅರಣ್ಯ ಭೂಮಿ ಎಷ್ಟು ; ಅನುಮತಿ ಪಡೆಯಲಾಗಿದೆಯೇ ; ಸ್ವಾಧೀನಪಡಿಸಿಕೊಳ್ಳಲಾಗಿದೆಯೇ; ಅವಶ್ಯಕತೆ ಇರುವ ಖಾಸಗಿ ಪಟ್ಟಾ ಭೂಮಿ ಎಷ್ಟು; ಸ್ವಾಧೀನಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ;

(ಇ) ಸದರಿ ಯೋಜನೆ ಅನುಷ್ಠಾನಕ್ಕೆ ಅಗತ್ಯವಿರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಜಿಲ್ಲಾ ಪಂಚಾಯತ್, ಗ್ರಾಮೀಣ, ಪಿ.ಡಬ್ಲ್ಯೂ.ಡಿ. ರಸ್ತೆಗಳ ಜಾಗವೆಷ್ಟು; ರಸ್ತೆ ಮಾರ್ಜಿನ್‌ನ ಜಾಗವೆಷ್ಟು; ಅನುಮತಿ ಪಡೆಯಲಾಗಿದೆಯೇ ? (ರಸ್ತೆವಾರು, ಪ್ರತ್ಯೇಕವಾಗಿ ಮಾಹಿತಿ ನೀಡುವುದು)

## ಇಂದಿರಾ ಕ್ಯಾಂಟೀನ್‌ಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆರಂಭಿಸುವ ಬಗ್ಗೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೮೪ (೯೬೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ, ರಾಜ್ಯದ ಯಾವ ಯಾವ ಪುರಸಭೆ, ಪಟ್ಟಣ ಪಂಚಾಯತ್, ನಗರಸಭೆ, ಪಾಲಿಕೆಗಳಲ್ಲಿ ಇಂದಿರಾ ಕ್ಯಾಂಟೀನನ್ನು ತೆರೆಯಲಾಗಿದೆ ಹಾಗೂ ತೆರೆಯಲು ಉದ್ದೇಶಿಸಲಾಗಿದೆ ; (ಮಾಹಿತಿ ಒದಗಿಸುವುದು)

(ಆ) ರಾಜ್ಯದಲ್ಲಿ ಇಂದಿರಾ ಕ್ಯಾಂಟೀನ್‌ನ ನಿರ್ಮಾಣ ಹಾಗೂ ನಿರ್ವಹಣೆಗೆ ಕಾಯ್ದಿರಿಸಿದ ಅನುದಾನವೆಷ್ಟು; ಆಹಾರ ತಯಾರಿಕೆಯನ್ನು ಯಾರಿಗೆ ಗುತ್ತಿಗೆ ನೀಡಲಾಗಿದೆ ಮತ್ತು ನೀಡಲು ಉದ್ದೇಶಿಸಲಾಗಿದೆ;

(ಇ) ಗ್ರಾಮಾಂತರ ಪ್ರದೇಶದಲ್ಲಿ ಇಂದಿರಾ ಕ್ಯಾಂಟೀನನ್ನು ಆರಂಭಿಸುವ ಯೋಜನೆಯನ್ನು ಸರ್ಕಾರವು ಹೊಂದಿದೆಯೇ?

## (AMRUT) ಅಮೃತ್ ಯೋಜನೆ ಬಗ್ಗೆ ಮಾಹಿತಿ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೮೫ (೯೭೪) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ (AMRUT) ಅಮೃತ್ ಯೋಜನೆಗೆ ಒಳಪಡುವ ಸ್ಥಳೀಯ ಸಂಸ್ಥೆಗಳು ಯಾವುವು;

(ಆ) (AMRUT) ಅಮೃತ್ ಯೋಜನೆಯಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಶೇಕಡಾವಾರು ಪಾಲು ಎಷ್ಟು; ನಮ್ಮ ರಾಜ್ಯದಲ್ಲಿ ಈ ಯೋಜನೆಯ ಪ್ರಯೋಜನ ಪಡೆದಿರುವ ಹಾಗೂ ಪಡೆಯುವ ಸ್ಥಳೀಯ ಸಂಸ್ಥೆಗಳು ಯಾವುವು;

(ಇ) ರಾಜ್ಯದಲ್ಲಿ (AMRUT) ಅಮೃತ್ ಯೋಜನೆಯಡಿಯಲ್ಲಿ ನಗರಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆಗಳಲ್ಲಿ ನೀರಿನ ಮೂಲದಿಂದ ನಗರದ ಮಧ್ಯೆ ಪೈಪ್‌ಲೈನ್ ಹಾದುಹೋಗುವ (enronte village) ಎಷ್ಟು ಗ್ರಾಮ ಪಂಚಾಯತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುವುದು; ಶುದ್ಧೀಕರಿಸಿದ ಸ್ವಚ್ಛ ನೀರನ್ನು ಪಡೆಯುವ ಗ್ರಾಮಪಂಚಾಯತ್‌ಗಳು (enronte) ಎಷ್ಟು? (ಯೋಜನೆವಾರು, ಗ್ರಾಮವಾರು ವಿವರ ನೀಡುವುದು)

## ಅಬಕಾರಿ ಇಲಾಖೆಯಿಂದ ವಶಪಡಿಸಿಕೊಂಡ ಸ್ವತ್ತುಗಳ ರಕ್ಷಣೆ ಹಾಗೂ ಇಲಾಖಾ ಕಟ್ಟಡಗಳ ಮೂಲಭೂತ ಸೌಕರ್ಯದ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೭೮೬ (೧೦೨೧) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಜಿಲ್ಲೆಯಲ್ಲಿರುವ ಅಬಕಾರಿ ಇಲಾಖೆಯ ವಿವಿಧ ಹಂತದ ಕಛೇರಿಗಳು ಯಾವುವು; ಇವುಗಳಲ್ಲಿ ಮಂಜೂರಾದ ಹುದ್ದೆಗಳೆಷ್ಟು; ಭರ್ತಿಯಾಗಿರುವ ಹುದ್ದೆಗಳೆಷ್ಟು; ಖಾಲಿ ಹುದ್ದೆಗಳೆಷ್ಟು ; ಹುದ್ದೆಗಳ ಭರ್ತಿಗೆ ಸರ್ಕಾರದ ಕ್ರಮವೇನು;

(ಆ) ಉಡುಪಿ ಜಿಲ್ಲೆಯ ಅಬಕಾರಿ ಇಲಾಖಾ ವ್ಯಾಪ್ತಿಯಲ್ಲಿ ವಿವಿಧ ಪ್ರಕರಣಗಳಡಿಯಲ್ಲಿ ವಶಪಡಿಸಿಕೊಂಡ ವಾಹನ, ಸ್ವತ್ತುಗಳು ಯಾವುವು; ಅವುಗಳಲ್ಲಿ ಈಗಾಗಲೇ ಸಂಬಂಧಿತ ವ್ಯಕ್ತಿಗಳಿಂದ ಬಿಡಿಸಿಕೊಳ್ಳಲಾಗಿರುವ ಸ್ವತ್ತುಗಳು ಎಷ್ಟು; ಬಾಕಿ ಉಳಿದಿರುವ ಸ್ವತ್ತುಗಳು ಎಷ್ಟು ; ಯಾವುವು ; ವಶಪಡಿಸಿಕೊಂಡ ಸ್ವತ್ತುಗಳ ರಕ್ಷಣೆಗೆ ಇಲಾಖೆಯ ಕ್ರಮವೇನು;

(ಇ) ಉಡುಪಿ ಜಿಲ್ಲೆಯಲ್ಲಿ ಸ್ವಂತ ಕಟ್ಟಡಗಳಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಅಬಕಾರಿ ಇಲಾಖೆಯ ಕಛೇರಿಗಳ ಸಂಖ್ಯೆ ಎಷ್ಟು ; ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳ ಸಂಖ್ಯೆ ಎಷ್ಟು ; ಯಾವುವು ; ಹೆಚ್ಚು ಆದಾಯ ಬರುವ ಅಬಕಾರಿ ಇಲಾಖಾ ಕಛೇರಿಗಳ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಇಲಾಖೆಯ ಕ್ರಮವೇನು?

## ರಾಜ್ಯದಲ್ಲಿರುವ ನಗರಸಭೆ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ವಿವರ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೮೭ (೫೪೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಮೇಲ್ಕಂಡ ಸ್ಥಳೀಯ ಸಂಸ್ಥೆಗಳಲ್ಲಿ ಎಷ್ಟು ಜನ ಹೊರಗುತ್ತಿಗೆ–ದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಹೊರಗುತ್ತಿಗೆದಾರರನ್ನು ಪೂರೈಸುತ್ತಿರುವ ಮ್ಯಾನ್‌ಪವರ್ ಏಜೆನ್ಸಿಗಳ ಸಂಖ್ಯೆ ಎಷ್ಟು; (ಅವರುಗಳ ವಿವರ ನೀಡುವುದು)

(ಈ) ಮ್ಯಾನ್‌ಪವರ್ ಏಜೆನ್ಸಿಗಳ ಹೊರಗುತ್ತಿಗೆದಾರರಾಗಿ ದುಡಿಯುತ್ತಿರು–ವಂತಹ ನೌಕರರ ಇಎಸ್‌ಐ ಮತ್ತು ಪಿಎಫ್‌ಗಳನ್ನು ಇಲಾಖೆಗೆ ಜಮಾ ಮಾಡದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ರಾಜ್ಯದಲ್ಲಿರುವ ನಗರಸಭೆ ಪುರಸಭೆ ಪಟ್ಟಣ ಪಂಚಾಯತಿಗಳಲ್ಲಿ ಐಟಿ ಸಿಬ್ಬಂದಿ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೮೮ (೯೨೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿಗಳಲ್ಲಿ ಐಟಿ ಸಿಬ್ಬಂದಿಗಳು ಹಲವಾರು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರಾಜ್ಯದಲ್ಲಿರುವ ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಐಟಿ ಸಿಬ್ಬಂದಿಗಳ ವಿವರ ನೀಡುವುದು; (ಹೆಸರು, ಹುದ್ದೆ, ಸೇವೆಗೆ ಸೇರಿದ ದಿನಾಂಕ, ಸೇವೆ ಸಲ್ಲಿಸುತ್ತಿರುವ ನಗರ ಸ್ಥಳೀಯ ಸಂಸ್ಥೆ)

(ಇ) ರಾಜ್ಯದಲ್ಲಿರುವ ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿಗಳಲ್ಲಿ ಐಟಿ ಸಿಬ್ಬಂದಿಗಳು ಹಲವಾರು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ಸದರಿಯವರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಕ್ರಮ ಕೈಗೊಳ್ಳದೇ ಇದ್ದಲ್ಲಿ ಸದರಿಯವರಿಗೆ ಸೇವಾ ಭದ್ರತೆ ಬಗ್ಗೆ ಕೈಗೊಂಡಿರುವ ಕ್ರಮಗಳೇನು ; ಹಾಲಿ ಇವರುಗಳಿಗೆ ನೀಡುತ್ತಿರುವ ಸೌಲಭ್ಯಗಳೇನು?

## ಪೊಲೀಸ್ ಇಲಾಖೆಯ ಆಪ್ತ ಸಮಾಲೋಚಕರ ತಜ್ಞರ ಕುರಿತು

೭೪೯ (೫೫೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಪೊಲೀಸ್ ಸಿಬ್ಬಂದಿಗಳ ಕಾರ್ಯ ಒತ್ತಡ ಹಾಗೂ ಮಾನಸಿಕ ಒತ್ತಡ ನಿಭಾಯಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿವೆ; (ವಿವರ ನೀಡುವುದು)

(ಆ) ರಾಜ್ಯ ಪೊಲೀಸ್ ಸಿಬ್ಬಂದಿಗಳಿಗೆ ಆಪ್ತ ಸಮಾಲೋಚಕ ತಜ್ಞರನ್ನು ನೇಮಿಸಲಾಗಿದೆಯೇ ; ನೇಮಿಸಿದ್ದಲ್ಲಿ, ರಾಜ್ಯದ ಕಮೀಷನರೇಟರ್ ಹಾಗೂ ಜಿಲ್ಲಾವಾರು ಆಪ್ತ ಸಮಾಲೋಚಕ ತಜ್ಞರ ವಿವರ ನೀಡುವುದು?

## ಪೊಲೀಸ್ ಇಲಾಖೆಯ ಅನುದಾನದ ಕುರಿತು

೭೯೦ (೫೫೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಸಂಚಾರಿ ನಿಯಮಗಳಿಗೋಸ್ಕರ ಪೊಲೀಸ್ ಇಲಾಖೆಯ ಯಾವ ಯಾವ ಇತರೆ ಇಲಾಖೆಗಳಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಅನುದಾನವನ್ನು ಪಡೆದಿದೆ ; (ವರ್ಷವಾರು, ಇಲಾಖೆವಾರು ಸಂಪೂರ್ಣ ವಿವರ ನೀಡುವುದು)

(ಆ) ಪಡೆದಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಕೈಗೊಂಡ ಕಾಮಗಾರಿಗಳ ವಿವರ, ವ್ಯಯವಾಗಿರುವ ಹಣವೆಷ್ಟು ; ಮತ್ತು ಕಾಮಗಾರಿ ಪಡೆದ ಗುತ್ತಿಗೆದಾರರ ಸಂಪೂರ್ಣ ವಿವರ ನೀಡುವುದು;

(ಇ) ಇದರಲ್ಲಿ ಕೈಗೊಂಡಿರುವ ಪ್ರತ್ಯೇಕ ಕಾಮಗಾರಿಗಳಾವುವು? (ಸಂಪೂರ್ಣ ವಿವರ ನೀಡುವುದು)

## ಬೀದಿನಾಯಿ ಹಾಗೂ ಹಂದಿಗಳ ಹಾವಳಿ ತಡೆಯುವ ಕುರಿತು

೭೯೧ (೯೮೯) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹುಬ್ಬಳ್ಳಿ–ಧಾರವಾಡದಲ್ಲಿ ಬೀದಿ ಹಂದಿ ಹಾಗೂ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವುದರಿಂದ ಸಾರ್ವಜನಿಕರಿಗೆ ಹಾಗೂ ಅಂಗಡಿ

ಮುಂಗಟ್ಟುಗಳಿಗೆ ತುಂಬಾ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವುಗಳನ್ನು ಹಿಡಿಯುವ ಹಾಗೂ ಸಾಗಾಣಿಕೆ ಪ್ರಕ್ರಿಯೆ ಪ್ರಾರಂಭವಾಗಿದೆಯೇ; ಅಥವಾ ನಿಲ್ಲಿಸಲಾಗಿದೆಯೇ; (ವಿವರ ನೀಡುವುದು)

(ಆ) ಬೀದಿ ಹಂದಿ ಹಾಗೂ ಬೀದಿ ನಾಯಿಗಳನ್ನು ಹಿಡಿಯಲು ಯಾವಾಗ ಎಷ್ಟು ಮೊತ್ತಕ್ಕೆ ಟೆಂಡರ್ ಕರೆಯಲಾಯಿತು ಇದನ್ನು ಯಾರಿಗೆ ಟೆಂಡರ್ ನೀಡಲಾಗಿದೆ ; (ವಿವರ ನೀಡುವುದು)

(ಇ) ಈವರೆಗೆ ಎಷ್ಟು ಬೀದಿ ಹಂದಿ ಹಾಗೂ ಬೀದಿ ನಾಯಿಗಳನ್ನು ಹಿಡಿಯಲಾಗಿದೆ ; ಹಿಡಿದಂತಹ ಬೀದಿ ಹಂದಿ ಹಾಗೂ ಬೀದಿ ನಾಯಿಗಳನ್ನು ಎಲ್ಲಿ ಸಾಗಾಣಿಕೆ ಮಾಡಲಾಗುತ್ತಿದೆ; ಬೀದಿ ಹಂದಿ ಹಾಗೂ ಬೀದಿ ನಾಯಿಗಳನ್ನು ಹಿಡಿಯಲು ಈವರೆಗೆ ಖರ್ಚಾದ ಹಣ ಎಷ್ಟು? (ಸಂಪೂರ್ಣ ವಿವರ ನೀಡುವುದು)

## ನಗರಾಭಿವೃದ್ಧಿ ಪ್ರಾಧಿಕಾರಗಳ ಸಿ.ಡಿ.ಪಿ. ಸಭೆಯ ಕುರಿತು

೭೯೨ (೯೯೦) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಗರಾಭಿವೃದ್ಧಿ ಪ್ರಾಧಿಕಾರಗಳ ಪ್ರಗತಿಯ ಕುರಿತು ತ್ರೈಮಾಸಿಕ ಪ್ರಗತಿ ಪರಿಶೀಲನಾ (ಸಿ.ಡಿ.ಪಿ) ಸಭೆ ನಡೆಸಲು ಅವಕಾಶವಿದೆಯೇ; (ವಿವರ ನೀಡುವುದು)

(ಆ) ಇದ್ದಲ್ಲಿ, ಈ ಸಭೆಯನ್ನು ನಡೆಸಲು ಪಾಲಿಸಬೇಕಾದ ಪ್ರಮುಖ ನಿಯಮಗಳಾವುವು ; (ವಿವರ ನೀಡುವುದು)

(ಇ) ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಪ್ರಗತಿಗೆ ಸಂಬಂಧಪಟ್ಟಂತೆ ಸಿ.ಡಿ.ಪಿ ಸಭೆಯನ್ನು ಈ ಹಿಂದೆ ಯಾವಾಗ ಕರೆಯಲಾಗಿತ್ತು ; (ವಿವರ ನೀಡುವುದು)

(ಈ) ಆ ಸಭೆಯಲ್ಲಿ ಚರ್ಚಿತವಾದ ಪ್ರಮುಖ ಅಂಶಗಳು ಯಾವುವು; ಆ ಸಭೆಗೆ ಗೈರುಹಾಜರಾಗಿದ್ದ ಸರ್ಕಾರಿ ಅಧಿಕಾರಿಗಳ ವಿವರ ನೀಡುವುದು;

(ಉ) ನಿಯಮಾವಳಿಗಳ ಪ್ರಕಾರ ಎಷ್ಟು ವರ್ಷಗಳಿಗೆ ಒಮ್ಮೆ ಸಿ.ಡಿ.ಪಿ ಸಭೆ ಮಾಡಬೇಕು; (ವಿವರ ನೀಡುವುದು)

(ಊ) ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಿ.ಡಿ.ಪಿ ಸಭೆಯನ್ನು ಹಲವಾರು ವರ್ಷಗಳಿಂದ ನಡೆಸದೇ ಇರುವುದು ನಿಜವೇ ; ನಿಜವಾಗಿದ್ದಲ್ಲಿ ಕಾರಣಗಳೇನು;

(ಋ) ಇದಕ್ಕೆ ಸಂಬಂಧಪಟ್ಟಂತೆ ಸಮರ್ಪಕವಾಗಿ ಸಭೆಯನ್ನು ನಡೆಸದಿರುವ ಕುರಿತು ಯಾವ ರೀತಿಯ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು?

## ರಸ್ತೆಗಳು ಸವಾರರಿಗೆ ಮಾರಕವಾಗಿರುವ ಬಗ್ಗೆ

೭೯೩ (೫೫೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರದಲ್ಲಿ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಜನರ ಸಂಚಾರಕ್ಕೆ ಹಾಗೂ ವಾಹನ ಸವಾರರಿಗೆ ಮಾರಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಜನರ ಸಂಚಾರಕ್ಕೆ ಹಾಗೂ ವಾಹನ ಸವಾರರಿಗೆ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ಬೀದರ್ ನಗರದಲ್ಲಿ ರಸ್ತೆ ಕಾಮಗಾರಿಗಾಗಿ ಕಳೆದ ೪ ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನ ಎಷ್ಟು ; (ವರ್ಷಾವಾರು ವಿವರ ನೀಡುವುದು)

(ಈ) ಬೀದರ್ ನಗರದಲ್ಲಿ ರಸ್ತೆಗಳು ಸಂಪೂರ್ಣ ಹಾಳಾಗಿದ್ದರೂ ಸಹ ರಸ್ತೆಗಳ ಸುಧಾರಣೆಗೆ ಕ್ರಮ ಕೈಗೊಳ್ಳದಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಉ) ಬೀದರ್ ನಗರದ ರಸ್ತೆಗಳ ಅಭಿವೃದ್ಧಿ / ಸುಧಾರಣೆಗೆ ಸರ್ಕಾರವು ತುರ್ತಾಗಿ ಕೈಗೊಳ್ಳುವ ಕ್ರಮಗಳೇನು ? (ವಿವರ ನೀಡುವುದು)

## ಖಾನಾಪುರ ಅರಣ್ಯದಲ್ಲಿ ಇತ್ತೀಚಿಗೆ ವಿದ್ಯಾರ್ಥಿನಿಯ ಕೊಲೆ ನಡೆದಿರುವ ಬಗ್ಗೆ

೭೯೪ (೫೩೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಭಾಲ್ಕಿ ತಾಲ್ಲೂಕಿನಲ್ಲಿ ಖಾನಾಪುರ ಅರಣ್ಯ ಪ್ರದೇಶದಲ್ಲಿ ಇತ್ತೀಚೆಗೆ ಕೋಸಂ ಗ್ರಾಮದ ಕಾಲೇಜು ವಿದ್ಯಾರ್ಥಿನಿಯ ಬರ್ಬರ ಕೊಲೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಸಂಪೂರ್ಣ ವಿವರ ನೀಡುವುದು;

(ಆ) ಈ ಕೊಲೆಯ ಆರೋಪಿಗಳ ಪತ್ತೆಗೆ ಪೊಲೀಸ್ ಇಲಾಖೆಯು ತುರ್ತಾಗಿ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಈ ಕೊಲೆಯ ಆರೋಪಿ / ಆರೋಪಿಗಳು ಪತ್ತೆಯಾಗಿದ್ದಲ್ಲಿ, ಅವರುಗಳ ವಿರುದ್ಧ ಯಾವ ಯಾವ ಪ್ರಕರಣಗಳು ದಾಖಲಾಗಿರುತ್ತವೆ ; (ವಿವರ ನೀಡುವುದು)

(ಈ) ಈ ಕೊಲೆಯಾದ ಬಾಲಕಿಯ ಕುಟುಂಬಕ್ಕೆ ಯಾವ ಯಾವ ಪರಿಹಾರ ಹಾಗೂ ಸೌಲಭ್ಯಗಳನ್ನು ಸರ್ಕಾರದಿಂದ ನೀಡಲಾಗಿದೆ/ ನೀಡಲಾಗುತ್ತದೆ ; ( ಸಂಪೂರ್ಣ ವಿವರ ನೀಡುವುದು)

(ಉ) ಸರ್ಕಾರವು ಅಮಾಯಕ ಹೆಣ್ಣು ಮಕ್ಕಳ ರಕ್ಷಣೆಗೆ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಕುಡಿಯುವ ನೀರು, ಒಳಚರಂಡಿ ಕಾಮಗಾರಿಗಳ ಬಗ್ಗೆ

೭೯೫ (೫೩೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರದ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರು. ಒಳಚರಂಡಿಗಳ ಕಾಮಗಾರಿಗಳನ್ನು ಯಾವ ವರ್ಷದಲ್ಲಿ, ಯಾವ ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿದೆ ; (ವರ್ಷವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ಕಾಮಗಾರಿಗಳು ಸಮಯಕ್ಕೆ ಸರಿಯಾಗಿ ಮುಕ್ತಾಯವಾಗಿ–ದೆಯೇ; ಇಲ್ಲವಾದಲ್ಲಿ, ಈ ಕಾಮಗಾರಿಗಳ ಗುತ್ತಿಗೆದಾರರ ಮೇಲೆ ಕೈಗೊಂಡ ಕ್ರಮವೇನು ; (ವಿವರ ನೀಡುವುದು)

(ಇ) ಈ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ತಗುಲಿದ ವೆಚ್ಚ ಎಷ್ಟು ? (ಯೋಜನೆವಾರು ವಿವರ ನೀಡುವುದು)

## ಪತ್ತೆಯಾದ ವಿವಿಧ ಪ್ರಕರಣಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೭೯೬ (೫೩೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪತ್ತೆಯಾದ ಕೊಲೆ, ದರೋಡೆ, ಕಳ್ಳತನ, ವಂಚನೆ, ವರದಕ್ಷಿಣೆ ಸಾವಿನ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಅಂಕಿ–ಅಂಶಗಳನ್ನು ಒದಗಿಸುವುದು)

(ಆ) ಈ ಪೈಕಿ ಯಾವ ಯಾವ ಪ್ರಕರಣಗಳಲ್ಲಿ ಎಫ್.ಐ.ಆರ್ ದಾಖಲೆ ಮಾಡಲಾಗಿದೆ ; ಯಾವ ಯಾವ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ; ಇನ್ನೂ ಪತ್ತೆಯಾಗದಿರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ಯಾವ ಯಾವ ಪ್ರಕರಣಗಳಲ್ಲಿ ಯಾರು ಯಾರಿಗೆ ಶಿಕ್ಷೆಯಾಗಿದೆ ;

(ಈ) ಜಿಲ್ಲೆಯಲ್ಲಿ ಹಲವಾರು ಪ್ರಕರಣಗಳಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು ; ಈ ವಿಷಯವನ್ನು ಸಿ.ಐ.ಡಿ. ತನಿಖೆಗೆ ಆದೇಶಿಸಲಾಗುವುದೇ ? (ಮಾಹಿತಿ ನೀಡುವುದು)

## ಪೌರ ಕಾರ್ಮಿಕರುಗಳಿಗೆ ಸಕಾಲಕ್ಕೆ ವೇತನ ಪಾವತಿಸದೆ ಇರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೭೯೭ (೫೩೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ; (ಅವರ ಪದನಾಮದೊಂದಿಗೆ ಹೆಸರುಗಳ ಸಮೇತ ವಿವರ ನೀಡುವುದು)

(ಆ) ವಾರ್ಡ್‌ಗಳಲ್ಲಿ ಸ್ವಚ್ಛತೆಗಾಗಿ ಎಷ್ಟು ಪೌರ ಕಾರ್ಮಿಕರನ್ನು ನೇಮಿಸಲಾಗಿದೆ ; (ಸಂಸ್ಥೆಗಳವಾರು, ವಾರ್ಡ್‌ಗಳವಾರು ಸ್ಪಷ್ಟ ಮಾಹಿತಿ ನೀಡುವುದು)

(ಇ) ಇವರುಗಳಿಗೆ ನೀಡಲಾಗುತ್ತಿರುವ ವೇತನವು ಸಕಾಲಕ್ಕೆ ಪಾವತಿಸಲಾಗುತ್ತಿದೆಯೇ ; ಇಲ್ಲವಾದಲ್ಲಿ, ಸಕಾಲಕ್ಕೆ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರ ಕಾರ್ಮಿಕರನ್ನು ಸುಮಾರು ಕಡೆಗಳಲ್ಲಿ ಇಲಾಖೆ ಬಿಟ್ಟು ಬೇರೆ ಕೆಲಸಗಳಿಗೂ ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಡೈರಿ ವೃತದಿಂದ ಗೊಟ್ಟಿಗೆರೆವರೆಗಿನ ರಸ್ತೆಯ ವಿಸ್ತರಣೆ ಕಾರ್ಯ ವಿಳಂಬವಾಗುತ್ತಿರುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೭೯೮ (೯೯೧) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿನ ಬನ್ನೇರುಘಟ್ಟ ರಸ್ತೆಯಲ್ಲಿ ಡೈರಿ ವೃತ್ತದಿಂದ ಗೊಟ್ಟಿಗೆರೆವರೆಗಿನ ರಸ್ತೆಯ ವಿಸ್ತರಣೆ ಕಾರ್ಯ ಪ್ರಾರಂಭವಾಗಿದ್ದು ಯಾವಾಗ ; ಸದರಿ ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಆ) ಸದರಿ ರಸ್ತೆಯಲ್ಲಿನ ಜೆಡಿ ಮರ ಜಂಕ್ಷನ್ ನಿಂದ ಕೋಳಿ ಫಾರಂ ಗೇಟ್ ವರೆಗಿನ ರಸ್ತೆ ಅತ್ಯಂತ ಕಿರಿದಾಗಿದ್ದು, ಇದನ್ನು ವಿಸ್ತರಿಸುವ ಸಂಬಂಧ ಯಾವಾಗ ಅಧಿಸೂಚನೆ ಹೊರಡಿಸಲಾಗಿದೆ ; ಸದರಿ ಕಾಮಗಾರಿ ಯಾವ ಹಂತದಲ್ಲಿದೆ ? (ವಿವರ ನೀಡುವುದು)

## ಆರನೇ ವೇತನ ಆಯೋಗದ ವರದಿಯನ್ನು ಜಾರಿಗೊಳಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೭೯೯ (೯೩೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆರನೇ ವೇತನ ಆಯೋಗದ ಪ್ರಮುಖ ಶಿಫಾರಸ್ಸುಗಳೇನು ;

(ಆ) ವೇತನ ಆಯೋಗದ ಶಿಫಾರಸ್ಸುಗಳನ್ನು ಯಾವಾಗ ಜಾರಿಗೆ ತರಲಾಗುವುದು ;

(ಇ) ವರದಿಯಲ್ಲಿ ಯಾವುದಾದರೂ ಇಲಾಖೆಯನ್ನು ವೇತನ ಹೆಚ್ಚಳದಿಂದ ಕೈಬಿಡುವಂತೆ ಶಿಫಾರಸ್ಸು ಮಾಡಲಾಗಿದೆಯೇ ; (ವಿವರ ನೀಡುವುದು)

(ಈ) ಪೊಲೀಸ್ ಇಲಾಖೆಯನ್ನು ವೇತನ ಹೆಚ್ಚಳದಿಂದ ಕೈಬಿಟ್ಟಿರುವುದು ನಿಜವೇ ; ನಿಜವಾಗಿದ್ದಲ್ಲಿ, ಕಾರಣವೇನು ;

(ಉ) ಈ ರೀತಿ ಯಾವುದೇ ಇಲಾಖೆಯನ್ನು ಕೈಬಿಟ್ಟಿದಲ್ಲಿ ತಾರತಮ್ಯ ಮಾಡಿದಂತೆ ಆಗುವುದಿಲ್ಲವೇ ?

## ಇತ್ತೀಚೆಗೆ ನಡೆಯುತ್ತಿರುವ ಪತ್ರಿಕೋದ್ಯಮ / ರಾಜಕೀಯ / ಧಾರ್ಮಿಕ ಸಂಘಟನೆಗಳ ಹಿನ್ನೆಲೆಯುಳ್ಳ ವ್ಯಕ್ತಿಗಳ ಕೊಲೆಗಳ ತನಿಖೆಗಳನ್ನು ತ್ವರಿತ ಮತ್ತು ಸಮರ್ಪಕವಾಗಿ ಮಾಡುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೮೦೦ (೯೪೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಪತ್ರಿಕೋದ್ಯಮ, ರಾಜಕೀಯ ಅಥವಾ ಧಾರ್ಮಿಕ ಸಂಘಟನೆಗಳ ಹಿನ್ನೆಲೆಯುಳ್ಳ ವ್ಯಕ್ತಿಗಳ ಕೊಲೆಯಾದವರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಸದರಿ ಪ್ರಕರಣಗಳ ತನಿಖೆ ಎಲ್ಲಿಯುವರೆಗೆ ಬಂದಿದೆ; (ಪ್ರಕರಣವಾರು ವಿವರ ನೀಡುವುದು)

(ಇ) ಆ ಪೈಕಿ ಪತ್ತೆಯಾದ ಪ್ರಕರಣಗಳೆಷ್ಟು; ಪತ್ತೆಯಾಗದ ಪ್ರಕರಣಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಈ) ಸಾಬೀತಾದ ಪ್ರಕರಣಗಳಲ್ಲಿ ಆರೋಪಿಗಳಿಗೆ ಯಾವ ರೀತಿಯ ಶಿಕ್ಷೆಯನ್ನು ಜಾರಿಗೊಳಿಸಲಾಗಿದೆ? (ವಿವರ ನೀಡುವುದು)

## ಸ್ಮಾರ್ಟ್ ಸಿಟಿ ಯೋಜನೆಗೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) ಹಾಗೂ ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು):–**

೮೦೧ (೯೬೨+೧೦೪೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಯಾವ ಯಾವ ನಗರಗಳನ್ನು ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆ ಮಾಡಲಾಗಿದೆ; (ವಿವರ ನೀಡುವುದು)

(ಆ) ಸ್ಮಾರ್ಟ್ ಸಿಟಿ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ವರ್ಷಾವಾರು, ನಗರವಾರು ಮಾಹಿತಿ ನೀಡುವುದು)

(ಇ) ಆ ಪೈಕಿ ಯಾವ ಯಾವ ನಗರಗಳನ್ನು ಅಭಿವೃದ್ಧಿ ಪಡಿಸಲು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ; (ದಿನಾಂಕ ಸಹಿತ ನಗರವಾರು ವಿವರ ನೀಡುವುದು)

(ಈ) ಬಿಡುಗಡೆಯಾಗಿರುವ ಅನುದಾನದಲ್ಲಿ ವೆಚ್ಚ ಮಾಡಿರುವ ಅನುದಾನವೆಷ್ಟು ; (ಕಾಮಗಾರಿವಾರು, ನಗರವಾರು ಮಾಹಿತಿ ನೀಡುವುದು)

(ಉ) ಜನವರಿ–೨೦೧೮ರ ಹೊತ್ತಿಗೆ ಪ್ರತಿ ಸ್ಮಾರ್ಟ್ ಸಿಟಿ ಅಭಿವೃದ್ಧಿ ಕಾಮಗಾರಿ ಅನುಷ್ಠಾನದ ಗುರಿ ಮತ್ತು ಎಷ್ಟು ಪ್ರಮಾಣದ ಅಭಿವೃದ್ಧಿ ಕಾಮಗಾರಿ ಮುಗಿದಿದೆ ; (ವಿವರ ನೀಡುವುದು)

(ಊ) ಸ್ಮಾಟ್ ಸಿಟಿ ಯೋಜನೆಯಲ್ಲಿ ತೆಗೆದುಕೊಂಡಿರುವ ಯೋಜನೆಗಳಾವುವು ; ಇವು ಯಾವ ಹಂತದಲ್ಲಿದೆ ; (ನಗರವಾರು ಮಾಹಿತಿ ನೀಡುವುದು)

(ಋ) ಯಾವ ಯಾವ ಸ್ಮಾರ್ಟ್ ಸಿಟಿ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ; ಬಿಡುಗಡೆಯಾದ ಹಣದಲ್ಲಿ ಪ್ರಸ್ತುತ ಎಷ್ಟು ಹಣ ವಿನಿಯೋಗಿಸಬೇಕಿತ್ತು ; ಎಷ್ಟು ಹಣ ವಿನಿಯೋಗಿಸಲಾಗಿದೆ ? (ವಿವರ ನೀಡುವುದು)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಟ್ಟಡ ಮಂಜೂರಾತಿ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):–**

೮೦೨ (೧೦೨೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಜೂರಾತಿ ಪಡೆದ ನಕ್ಷೆಯ ವಿರುದ್ಧವಾಗಿ ಕಟ್ಟಡ ಕಟ್ಟುವಾಗ ಯಾವ ಕಾಯ್ದೆಯ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ; ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು ;

(ಆ) ಮಂಜೂರಾತಿ ಪಡೆದ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಾಣ ಹಂತದಲ್ಲಿ ಪಾಲಿಕೆಯ ಜವಾಬ್ದಾರಿಗಳು ಏನು ; ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು ;

(ಇ) ಮಂಜೂರಾತಿ ಪಡೆದ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಿದ ಕಟ್ಟಡಗಳನ್ನು ನಿಲ್ಲಿಸಲು ಪಾಲಿಕೆಗೆ ಅಧಿಕಾರ ಇದೆಯೇ ? (ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

## ವಾಹನ ಚಾಲನೆ ಸಮಯದಲ್ಲಿ ಮೊಬೈಲ್ ಫೋನ್ ಬಳಸುವ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):–**

೮೦೩ (೧೦೨೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಾಹನ ಚಾಲಕರು ವಾಹನ ಚಾಲನಾ ಸಂದರ್ಭದಲ್ಲಿ ಮೊಬೈಲ್ ಫೋನ್ ಬಳಸಬಾರದೆಂದು ನ್ಯಾಯಾಲಯದಿಂದ ಆದೇಶವಿದೆಯೇ ; ಇದ್ದಲ್ಲಿ, ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು ;

(ಆ) ಈ ಸಂಬಂಧ ಸರ್ಕಾರದಿಂದ ವಾಹನ ಚಾಲನಾ ಸಮಯದಲ್ಲಿ ಮೊಬೈಲ್ ಬಳಕೆ ನಿಷೇದ ಮಾಡಲಾಗಿದೆಯೇ ; ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು ;

(ಇ) ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ ಬಸ್ ಚಾಲಕರು, ಖಾಸಗಿ ಬಸ್ ಚಾಲಕರು, ಲಾರಿ ಚಾಲಕರು ಹಾಗೂ ಬೃಹತ್ ವಾಹನಗಳ

ಚಾಲಕರು ವಾಹನ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬಳಸುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡುವುದು ; (ದಾಖಲಾತಿಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಈ) ಕಳೆದ ನಾಲ್ಕು ವರ್ಷಗಳಲ್ಲಿ ಈ ಕಾನೂನನ್ನು ಉಲ್ಲಂಘಿಸಿರುವ ವಾಹನ ಚಾಲಕರ ಮೇಲೆ ಎಷ್ಟು ಮೊಕದ್ದಮೆಗಳನ್ನು ದಾಖಲಿಸಲಾಗಿದೆ ; ಕಾನೂನು ಜಾರಿಯಾದಾಗಿನಿಂದ ವಿಧಿಸಿರುವ ದಂಡ ಎಷ್ಟು; ದಾಖಲಾತಿಗಳೊಂದಿಗೆ ಪ್ರತ್ಯೇಕವಾಗಿ ದ್ವಿಚಕ್ರ, ಖಾಸಗಿ ಹಾಗೂ ಸಾರ್ವಜನಿಕ ತ್ರಿಚಕ್ರ, ಕಾರು, ಕೆ.ಎಸ್.ಆರ್.ಟಿ.ಸಿ., ಬಿ.ಎಂ.ಟಿ.ಸಿ., ಖಾಸಗಿ ಬಸ್ ಚಾಲಕರು, ಲಾರಿ ಚಾಲಕರು ಹಾಗೂ ಬೃಹತ್ ವಾಹನಗಳ ಮಾಹಿತಿಯೊಂದಿಗೆ ಮಾಹಿತಿ ನೀಡುವುದು ?

## ಪೌರಾಡಳಿತ ಇಲಾಖೆಯಲ್ಲಿ ಪೌರ ಸುಧಾರಣಾ ಕೋಶ ತೆರೆಯುವ ಬಗ್ಗೆ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೮೦೪ (೯೫೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪೌರಾಡಳಿತ ಇಲಾಖೆಯಲ್ಲಿ ಪೌರ ಸುಧಾರಣಾ ಕೋಶವನ್ನು ತೆರೆಯಲಾಗಿದೆಯೇ ; ತೆರೆದಿದ್ದಲ್ಲಿ, ಎಂದಿನಿಂದ ಈ ಕೋಶ ಕಾರ್ಯನಿರ್ವಹಿಸುತ್ತಿದೆ ; ಮತ್ತು ಇದರ ಮೂಲ ಉದ್ದೇಶ ಏನು ;

(ಆ) ರಾಜ್ಯದ ಪುರಸಭೆಯ ಮುಖ್ಯ ಅಧಿಕಾರಿಗಳ ಅನುಮೋದನೆಗೊಂಡ ಹುದ್ದೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ; ಎಷ್ಟು ಹುದ್ದೆಗಳನ್ನು ನಿಯೋಜನೆ ಮೇಲೆ ತುಂಬಲಾಗಿದೆ ; ಪುರಸಭೆ ಮುಖ್ಯಾಧಿಕಾರಿಗಳ ಹುದ್ದೆಗೆ ಯಾವ ವಿದ್ಯಾರ್ಹತೆಯನ್ನು ನಿಗಧಿಗೊಳಿಸಲಾಗಿದೆ ;

(ಇ) ಕರ್ನಾಟಕದಲ್ಲಿ ಪೌರಾಡಳಿತ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಪುರಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಎಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು) ಇವುಗಳಲ್ಲಿ ಎಷ್ಟು ಸಂಸ್ಥೆಗಳು ತಮ್ಮ ವೆಬ್‌ಸೈಟ್‌ಗಳನ್ನು ಹೊಂದಿರುತ್ತವೆ ; ಹೊಂದಿದ್ದಲ್ಲಿ, ಪ್ರತಿ ಸಂಸ್ಥೆಯ ವೆಬ್‌ಸೈಟ್ ವಿಳಾಸ ನೀಡುವುದು ; ಎಷ್ಟು ಸಂಸ್ಥೆಗಳು ಆಸ್ತಿ–ಜಿ.ಐ.ಎಸ್. ಆದಾರಿತ ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುತ್ತವೆ ;

(ಈ) ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಪುರಸಭೆಯಲ್ಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಇವರಲ್ಲಿ ಗುತ್ತಿಗೆ ಆಧಾರದ ಮೇಲೆ ಮತ್ತು ತಾತ್ಕಾಲಿಕವಾಗಿ ಎಷ್ಟು ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ ; ವೇತನ ಪಾವತಿಗಾಗಿ ಇಲ್ಲಿನ ಪುರಸಭೆ ಸಿಬ್ಬಂದಿ ಮುಷ್ಕರವನ್ನು ಮಾಡಿದ್ದಾರೆಯೇ ; ಇವರಿಗೆ ವೇತನ ನಿಗಧಿತ ಸಮಯದಲ್ಲಿ ಪಾವತಿ ಮಾಡಲಾಗಿದೆಯೇ ; ಮಾಡದೇ ಇದ್ದಲ್ಲಿ, ಕಾರಣಗಳೇನು ?

## ಪೊಲೀಸ್ ಸಿಬ್ಬಂದಿ ಮಾಹಿತಿ ಕೋರಿ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೮೦೫ (೯೫೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಕೋರ್ಟ್ ಕಾರ್ಯ ನಿರ್ವಹಣೆಗೆ ಪ್ರತ್ಯೇಕ ಸಿಬ್ಬಂದಿಯನ್ನು ನೀಡಲಾಗಿದೆಯೇ ;

ನೀಡಿದ್ದಲ್ಲಿ, ಎಷ್ಟು ಸಿಬ್ಬಂದಿ ಪ್ರತಿ ಠಾಣೆವಾರು ಕೋರ್ಟ್ ಕಾರ್ಯವನ್ನು ನಿರ್ವಹಣೆ ಮಾಡುತ್ತಿದ್ದಾರೆ ;

(ಆ) ಕರ್ನಾಟಕ ಪೊಲೀಸ್ ಇಲಾಖೆಯು ಚುನಾಯಿತಿ ಜನಪ್ರತಿನಿಧಿಗಳಿಗೆ ಗನ್‌ಮ್ಯಾನಗಳನ್ನು ನೀಡಲು ಯಾವ ಯಾವ ಮಾನದಂಡಗಳನ್ನು ಹೊಂದಿರುತ್ತದೆ ; ಕರ್ನಾಟಕದಲ್ಲಿ ಚುನಾಯಿತಿ ಪ್ರತಿನಿಧಿಗಳು ಹಾಗೂ ಮಾಜಿ ಚುನಾಯಿತ ಪ್ರತಿನಿಧಿಗಳು ಯಾರು ಯಾರು, ಎಷ್ಟು ಎಷ್ಟು ಗನ್‌ಮ್ಯಾನ್‌ಗಳ ಸೇವೆಯನ್ನು ಹೊಂದಿರುತ್ತಾರೆ ; (ಹೆಸರು ಸಹಿತವಾಗಿ ಪೂರ್ಣ ಮಾಹಿತಿಯನ್ನು ನೀಡುವುದು)

(ಇ) ಕರ್ನಾಟಕ ಪೊಲೀಸ್ ಇಲಾಖೆಯು ರಾಜ್ಯದಲ್ಲಿ ಎಷ್ಟು ಮಂದಿಗೆ ವೈಯುಕ್ತಿಕ ಭದ್ರತೆಗಾಗಿ ಪಿಸ್ತೂಲು / ಗನ್/ ಬಂದೂಕು / ರಿವಾಲ್ವಾರ್‌ಗಳನ್ನು ನೀಡಿರುತ್ತದೆ ; ಇಂತಹ ಸಶಸ್ತ್ರಗಳನ್ನು ಹೊಂದಿದವರು ಪ್ರತಿ ವರ್ಷ ಇವುಗಳ ನವೀಕರಣವನ್ನು ಹೊಂದಿರುತ್ತಾರೆಯೇ ; ನವೀಕರಣ ಹೊಂದದಿರುವ ಎಷ್ಟು ಸಶಸ್ತ್ರಗಳು ಇರುತ್ತವೆ ; (ಹೆಸರು ಸಹಿತವಾಗಿ ಪೂರ್ಣ ಮಾಹಿತಿಯನ್ನು ನೀಡುವುದು)

(ಈ) ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಪ್ರತಿ ಪೊಲೀಸ್ ಠಾಣೆಯಲ್ಲಿ ಜನ ಸಂಪರ್ಕ ಸಭೆಗಳನ್ನು ನಡೆಸಲಾಗುತ್ತಿದೆಯೇ ; ನಡೆಸುತ್ತಿದ್ದಲ್ಲಿ, ಎಷ್ಟು ದಿನಗಳಿಗೊಮ್ಮೆ ಇಂತಹ ಸಭೆಗಳನ್ನು ನಡೆಸಲಾಗುವುದು ; ಎಷ್ಟು ಪೊಲೀಸ್ ಠಾಣೆಗಳು ಜನ ಸಂಪರ್ಕ ಸಭೆಗಳನ್ನು ನಡೆಸಿರುವುದಿಲ್ಲ ?

# ಮೆಟ್ರೋ ರೈಲು ಯೋಜನೆ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೮೦೬ (೯೫೪) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಮೆಟ್ರೋ ರೈಲು ಯೋಜನೆಯು ಎಷ್ಟು ಹಂತದ ಯೋಜನೆಗಳನ್ನು ಹೊಂದಿರುತ್ತದೆ; ಇದು ಯಾವ ವರ್ಷ ಪ್ರಾರಂಭ ಆಯಿತು; ಮೊದಲ ಹಂತದ ಯೋಜನೆಯ ಗಾತ್ರ ಎಷ್ಟು; ಮೊದಲ ಹಂತ ಪೂರ್ಣಗೊಂಡಾಗ ಒಟ್ಟು ಎಷ್ಟು ಹಣವನ್ನು ಈ ಯೋಜನೆಗೆ ವಿನಿಯೋಗಿಸಲಾಗಿದೆ; ಎಷ್ಟು ಉದ್ದದ ಯೋಜನೆಗಳನ್ನು ಇದು ಹೊಂದಿರುತ್ತದೆ;

(ಆ) ಮೆಟ್ರೋ ಎರಡನೇ ಹಂತದ ಕಾರಿಡಾರ್‌ನ ಉದ್ದ ಎಷ್ಟು; ಈ ಯೋಜನೆಗೆ ಯಾವ ಯಾವ ಮೂಲದ ಮೂಲಕ ಸಂಪನ್ಮೂಲಗಳನ್ನು ಕ್ರೋಢಿಕರಿಸಲಾಗಿದೆ; ಯೋಜನೆಯ ಒಟ್ಟು ಮೊತ್ತ ಎಷ್ಟು; ಇವುಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಬಾಕಿಯಿರುವ ಕಾಮಗಾರಿಗಳು ಎಷ್ಟು; ಬಿಡುಗಡೆಯಾಗಿರುವ ಹಣ ಎಷ್ಟು ಮತ್ತು ಬಾಕಿ ಇರುವ ಹಣ ಎಷ್ಟು;

(ಇ) ಟೆಂಡರ್ ಶೂರ್ ಯೋಜನೆಯಡಿ ಬಿ.ಬಿ.ಎಂ.ಪಿ.ಯಲ್ಲಿ ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಇದಕ್ಕೆ ಅಂದಾಜು ಮಾಡಿರುವ ಅನುದಾನ ಎಷ್ಟು; ಬಿಡುಗಡೆ ಆಗಿರುವ ಅನುದಾನ ಎಷ್ಟು; ಬಾಕಿ ಇರುವ ಅನುದಾನ ಎಷ್ಟು; ಕೈಗೊಂಡಿರುವ ಕಾಮಗಾರಿಗಳು ಎಷ್ಟು; ಬಾಕಿ ಇರುವ ಕಾಮಗಾರಿ ಎಷ್ಟು; ಯಾವ ಯಾವ ಕಾಮಗಾರಿಗಳನ್ನು ಯಾವ ಯಾವ

ಗುತ್ತಿಗೆದಾರರಿಗೆ ನೀಡಲಾಗಿದೆ ; (ಯೋಜನೆವಾರು, ಕಾಮಗಾರಿವಾರು, ಅಂದಾಜುವಾರು ವಿವರ ನೀಡುವುದು)

(ಈ) ಟೆಂಡರ್ ಶೂರ್ ಯೋಜನೆಯಡಿ ಬಿ.ಬಿ.ಎಂ.ಪಿ. ಹೊರತುಪಡಿಸಿ ಇತರೆ ಯಾವ ಯಾವ ಕಾಮಗಾರಿಗಳನ್ನು ಬೆಂಗಳೂರು ಮಹಾನಗರ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದೆ ? (ಸದರಿ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ನೀಡುವುದು)

## ಹಜ್ ಸಮಿತಿ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೮೦೭ (೯೫೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕದಲ್ಲಿ ಹಜ್ ಸಮಿತಿಯನ್ನು ರಚಿಸಲಾಗಿರುತ್ತದೆಯೇ ; ರಚಿಸಿದ್ದಲ್ಲಿ, ಎಂದಿನಿಂದ ಹಜ್ ಸಮಿತಿ ಕಾರ್ಯನಿರ್ವಹಿಸುತ್ತಿದೆ ; ಮತ್ತು ಸಮಿತಿಯ ವಿವರಗಳನ್ನು ನೀಡುವುದು ; ಕರ್ನಾಟಕ ಹಜ್ ಸಮಿತಿಯ ನೋಡಲ್ ಅಧಿಕಾರಿ ಯಾರು ;

(ಆ) ೨೦೧೩–೧೪ನೇ ಸಾಲಿನಿಂದ ಇಲ್ಲಿಯವರೆಗೆ ಎಷ್ಟು ಹಜ್ ಯಾತ್ರಿಗಳು ಹಜ್ ಪ್ರವಾಸವನ್ನು ಕೈಗೊಂಡಿರುತ್ತಾರೆ ; ರಾಜ್ಯ ಸರ್ಕಾರವು ಪ್ರತಿ ಹಜ್ ಯಾತ್ರಿಗೆ ಎಷ್ಟು ಹಣ ಮತ್ತು ಯಾವ ಯಾವ ಸೌಕರ್ಯಗಳನ್ನು ನೀಡುತ್ತಿದೆ ; ಕರ್ನಾಟಕದಲ್ಲಿ ಹಜ್ ಯಾತ್ರಿಕರ ಸೌಕರ್ಯಕ್ಕಾಗಿ ಎಷ್ಟು ಹಜ್ ಭವನಗಳನ್ನು ನಿರ್ಮಿಸಲಾಗಿದೆ ; ನಿರ್ಮಿಸದೇ ಇದ್ದಲ್ಲಿ, ನಿರ್ಮಿಸುವ ಯೋಜನೆ ಸರ್ಕಾರಕ್ಕೆ ಇದೆಯೇ ;

(ಇ) ಹಜ್ ಯಾತ್ರೆಗೆ ಸಂಬಂಧಪಟ್ಟಂತೆ ಪ್ರತಿ ವರ್ಷ ಸರ್ಕಾರಕ್ಕೆ ಎಷ್ಟು ದೂರುಗಳು ಯಾವ ಯಾವ ಕಾರಣಕ್ಕೆ ಬಂದಿರುತ್ತವೆ ; ದೂರುಗಳು ಬಂದಿದ್ದಲ್ಲಿ, ಇವುಗಳ ನಿವಾರಣೆಗೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ ;

(ಈ) ಹಜ್ ಯಾತ್ರಿಕರ ಪ್ರವಾಸಕ್ಕೆ ಅನುಕೂಲವಾಗಲು ಪ್ರತಿ ವರ್ಷ ಯಾವ ಸಮಯದಲ್ಲಿ ರಾಜ್ಯ ಸರ್ಕಾರ ಪ್ರಕಟಣೆಯನ್ನು ನೀಡುತ್ತದೆ ; ಅವರ ಪ್ರವಾಸಕ್ಕೆ ಅನುಗುಣವಾಗಿ ಆರೋಗ್ಯ ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಪಾಸ್ ವಿತರಣೆ, ಮಾರ್ಗಸೂಚನೆ, ಟಿಕೆಟ್ ವಿತರಣೆ ಹಾಗೂ ಹಣ ಸಹಾಯಕ್ಕಾಗಿ ರಾಜ್ಯ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ ?

## ರಾಜ್ಯದಲ್ಲಿ ಹೆಚ್ಚುತ್ತಿರುವ ಮದ್ಯದಂಗಡಿಗಳ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೦೮ (೫೫೫) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯತಿ / ನಗರಸಭೆ / ಪಟ್ಟಣ ಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಅನುಮತಿ ನೀಡಲಾದ ಮದ್ಯದ ಅಂಗಡಿಗಳು ಎಷ್ಟು ; (ವಿವರ ನೀಡುವುದು)

(ಆ) ಸರ್ಕಾರಿ ನಿಯಮದ ಪ್ರಕಾರ ಒಂದು ಗ್ರಾಮ ಪಂಚಾಯತಿ / ನಗರಸಭೆ / ಪಟ್ಟಣ ಪಂಚಾಯತಿಗಳ ವ್ಯಾಪ್ತಿಯಲ್ಲಿ ಎಷ್ಟು ಮದ್ಯದ ಅಂಗಡಿಗಳಿರಬೇಕು ; ಅನುಮತಿಸಲು ಇರುವ ನಿಯಮಗಳಾವುವು ;

(ಇ) ನಿಯಮಬಾಹಿರವಾಗಿ ತೆರೆದಿರುವ ಮದ್ಯದಂಗಡಿಗಳೆಷ್ಟು ; ಇದ್ದಲ್ಲಿ, ಅಂತಹ ಮದ್ಯದ ಅಂಗಡಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಕೊಡಗು ಜಿಲ್ಲೆಯಲ್ಲಿ ಅಕ್ರಮ ಮದ್ಯದಂಗಡಿಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

## ಮೈಸೂರು ನಗರದಲ್ಲಿ ವಾಹನ ನಿಲುಗಡೆ ಅವ್ಯವಸ್ಥೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೯ (೯೭೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರದಲ್ಲಿ ಪ್ರವಾಸಿಗರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವ ಯಾವ ಪ್ರಮುಖ ಸ್ಥಳಗಳಲ್ಲಿ ಎಲ್ಲೆಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ; (ವಿವರ ಒದಗಿಸುವುದು) ಪಾರ್ಕಿಂಗ್ ಲಾಟ್‌ಗಳಲ್ಲಿ ಸೂಕ್ತ ವಿವರಣಾ ಫಲಕಗಳಿಲ್ಲದೆ ಪ್ರವಾಸಿಗರಿಂದ ಹೆಚ್ಚುವರಿ ಶುಲ್ಕ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಏಕಮುಖ ಸಂಚಾರ, ಮಾರ್ಗದರ್ಶಿ ಫಲಕದ ಕೊರತೆ ಮೊದಲಾದವುಗಳಿಂದ ಹೊರರಾಜ್ಯದ ಪ್ರವಾಸಿ ವಾಹನಗಳು ದಿಕ್ಕುತಪ್ಪಿ ಸಂಚರಿಸುವುದು, ಸಂಚಾರಿ ಪೊಲೀಸರು ಹಿಡಿದು ದಂಡ ವಿಧಿಸುವುದು ಇದರಿಂದ ಪ್ರವಾಸಿಗರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹೊರರಾಜ್ಯ ಪ್ರವಾಸಿಗರಿಗೆ ಅನುಕೂಲವಾಗುವಂತೆ ಸಂಚಾರ

ವ್ಯವಸ್ಥೆಯ ಬಗ್ಗೆ ನಗರದಲ್ಲಿ ಸೂಕ್ತ ಮಾರ್ಗದರ್ಶಿ ಫಲಕಗಳನ್ನು ಅಳವಡಿಸಲು ಕ್ರಮ ಜರುಗಿಸಲಾಗುವುದೇ ;

(ಇ) ಮೃಗಾಲಯ, ಸಯ್ಯಾಜಿರಾವ್ ರಸ್ತೆ, ಮೈಸೂರು ಮಾಲ್, ಲ್ಯಾಂಡ್ಸ್‌ಡೌನ್ ಬಿಲ್ಡಿಂಗ್ ಮೊದಲಾದ ಸಾರಿಗೆ ದಟ್ಟಣೆ ಇರುವ ಕಡೆ ಸಾರ್ವಜನಿಕರು ವಾಹನ ನಿಲುಗಡೆ ನಿಷೇಧಿತ ಜಾಗದಲ್ಲಿ ವಾಹನ ನಿಲ್ಲಿಸುವುದು, ಸರಿಯಾಗಿ ವಾಹನ ನಿಲುಗಡೆ ಮಾಡದೇ ಇರುವುದು, ಇದರಿಂದ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದರ ನಿವಾರಣೆಗೆ ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು ?

## ಚಾಮರಾಜನಗರದಲ್ಲಿ ತರಕಾರಿ ಮಾರುಕಟ್ಟೆಯ ನಿರ್ಮಾಣ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೦ (೯೭೬) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಾಮರಾಜನಗರದಲ್ಲಿ ಈಗಿರುವ ಹಳೆಯ ತರಕಾರಿ ಮಾರುಕಟ್ಟೆ ಜಾಗದಲ್ಲಿ ಹೊಸ ತರಕಾರಿ ಮಾರುಕಟ್ಟೆಯನ್ನು ನಿರ್ಮಿಸುವ ಯೋಜನೆ ಇದೆಯೇ ; ಈ ಕಾಮಗಾರಿಗೆ ಒದಗಿಸಿರುವ ಅನುದಾನ ಎಷ್ಟು ; ಕಾಮಗಾರಿ ಯಾವ ಹಂತದಲ್ಲಿದೆ ; ಹಳೆಯ ಮಾರುಕಟ್ಟೆಯಲ್ಲಿ ಎಷ್ಟು ಜನ ತರಕಾರಿ ವ್ಯಾಪಾರಸ್ಥರಿದ್ದರು ಎಂಬುದನ್ನು ಸರಿಯಾಗಿ ದಾಖಲಿಸಿ ಅವರಿಗೆ ಸೂಕ್ತವಾದ ಸ್ಥಳದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ ;

(ಆ) ಚಾಮರಾಜನಗರದಲ್ಲಿ ಮುಖ್ಯಮಂತ್ರಿಯವರ ವಿಶೇಷ ಅನುದಾನದಿಂದ ಮೂರು ಕಡೆ ಮಾಲ್‌ನ್ನು ನಿರ್ಮಿಸುವ ಯೋಜನೆ ಇದೆಯೇ ; ಈ ಯೋಜನೆಯ ರೂಪುರೇಷೆಗಳೇನು ; ಇದಕ್ಕೆ ಒದಗಿಸಿರುವ ಅನುದಾನ ಎಷ್ಟು; ಕಾಮಗಾರಿಗೆ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆಯೇ ; ಯಾವಾಗ ಕಾಮಗಾರಿಗಳನ್ನು ಆರಂಭಿಸಲಾಗುವುದು ?

## ಮೈಸೂರು ನಗರದ ಇಂದಿರಾ ಕ್ಯಾಂಟೀನ್‌ಗಳಲ್ಲಿ ಶುಚಿತ್ವದ ಕೊರತೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೧ (೯೭೭) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರಿನಲ್ಲಿ ನಿರ್ಮಾಣವಾಗಿ ಕಾರ್ಯಾಚರಣೆ ಮಾಡುತ್ತಿರುವ ಇಂದಿರಾ ಕ್ಯಾಂಟೀನ್‌ಗಳು ಎಷ್ಟು; ಯಾವುವು ; ಮೈಸೂರು ನಗರದಲ್ಲಿ ಎಲ್ಲೆಲ್ಲಿ ಇನ್ನೂ ಎಷ್ಟು ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ ;

(ಆ) ಮೈಸೂರು ನಗರದಲ್ಲಿ ಹಾಲಿ ಕಾರ್ಯಾಚರಣೆ ಮಾಡುತ್ತಿರುವ ಇಂದಿರಾ ಕ್ಯಾಂಟೀನ್‌ಗಳ ಸುತ್ತಮುತ್ತ ಮತ್ತು ಒಳಭಾಗದಲ್ಲಿ ಶುಚಿತ್ವದ ಕೊರತೆ, ಪ್ಲಂಬಿಂಗ್ ಅವ್ಯವಸ್ಥೆ, ತಟ್ಟೆ, ಲೋಟ ತೊಳೆಯಲು ನೀರಿನ ಕೊರತೆ, ಶುದ್ಧ ನೀರಿನ ಘಟಕಗಳು ಕೆಲಸ ಮಾಡದೇ ಕುಡಿಯುವ ನೀರಿನ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೆಲವು ಕಡೆ ಪೇಪರ್ ಪ್ಲೇಟ್‌ನಲ್ಲಿ ಊಟ, ತಿಂಡಿ ನೀಡುತ್ತಿರುವುದು, ತೂಕದ ಯಂತ್ರ ಅಳವಡಿಸದೇ ಇರುವುದು, ಸಿದ್ಧಪಡಿಸಿದ ಆಹಾರವು ಸಕಾಲಕ್ಕೆ ಬಾರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

## ಸರ್ಕಾರಿ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೮೧೨ (೯೬೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರದ ಅಧೀನದಲ್ಲಿರುವ ಸರ್ಕಾರಿ ಇಲಾಖೆಗಳೆಷ್ಟು ;

(ಆ) ಈ ಇಲಾಖೆಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳೆಷ್ಟು ; ಖಾಲಿ ಹುದ್ದೆಗಳೆಷ್ಟು ; (ವಿವರ ನೀಡುವುದು)

(ಇ) ಅಧಿಕ ಹುದ್ದೆಗಳು ಖಾಲಿ ಇರುವುದರಿಂದ ಆಡಳಿತ ಸುಧಾರಣೆಗೆ ತೊಂದರೆಯಾಗಿರುವುದು ಮತ್ತು ನಿರುದ್ಯೋಗಿ ಯುವಕರಿಗೆ ಉದ್ಯೋಗ ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಉ) ಯಾವ ಕಾಲಮಿತಿಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ? (ವಿವರ ನೀಡುವುದು)

## ಮೆಟ್ರೋ ರೈಲಿನಲ್ಲಿ ಮಹಿಳೆಯರ ಪ್ರತ್ಯೇಕ ಬೋಗಿ ಅಳವಡಿಸುವ ಕುರಿತು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೮೧೩ (೫೩೫) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೆಟ್ರೋ ರೈಲಿನಲ್ಲಿ ತುಂಬಿ ತುಳುಕುವ ಜನ ದಟ್ಟಣೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹೆಚ್ಚುವರಿ ಬೋಗಿಗಳನ್ನು ಅಳವಡಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಮೆಟ್ರೋ ರೈಲಿನಲ್ಲಿ ಹೆಚ್ಚು ಯುವತಿಯರು, ಮಹಿಳೆಯರು ಪ್ರಯಾಣ ಮಾಡುತ್ತಿದ್ದು, ಮಹಿಳೆಯರಿಗೆ ಪ್ರತ್ಯೇಕ ಭೋಗಿಗಳನ್ನು ಅಳವಡಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ ;

(ಈ) ರಾತ್ರಿ ವೇಳೆ ಪ್ರಯಾಣಿಸುವಾಗ ಹಲವಾರು ಕಹಿ ಘಟನೆಗಳು ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಅನಧಿಕೃತ ಕಟ್ಟಡ ನಿರ್ಮಾಣದ ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೮೧೪ (೯೮೫) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ, ಚಿಕ್ಕಪೇಟೆ ಮುಖ್ಯ ರಸ್ತೆ ಸೈಟ್ ನಂ. ೨೦೨,೨೦೩ ಮತ್ತು ೨೦೩/೧ ಓ.ಟಿ.ಸಿ ರೋಡ್, ವಾರ್ಡ್

೧೯೯೯ರಲ್ಲಿ ವಾಣಿಜ್ಯ ಬಹುಮಹಡಿ ಕಟ್ಟಡವನ್ನು ಅನಧಿಕೃತವಾಗಿ ಮತ್ತು ನಕ್ಷೆಗೆ ವಿರುದ್ಧವಾಗಿ ಕಾನೂನು ಬಾಹಿರವಾಗಿ ತಲೆ ಎತ್ತಿರುವುದು (Fire and Safety Home) ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಮೇಲ್ಕಂಡ ಕಟ್ಟಡಕ್ಕೆ ಗೃಹ ಇಲಾಖೆಯಿಂದ ಎನ್.ಓ.ಸಿ ಹಾಗೂ Complance Certificate ಪಡೆದಿದ್ದಾರೆಯೇ ; ಹಾಗಿದ್ದರೆ, ಪ್ರತಿಗಳನ್ನು ಒದಗಿಸುವುದು ;

(ಇ) ಸದರಿ ಕಟ್ಟಡವನ್ನು ನಿರ್ಮಿಸಲು ಕಾನೂನಿನ ರೀತ್ಯಾ ಅನುಮತಿಯನ್ನು ಪಡೆಯಲಾಗಿದೆಯೇ ; ಪಡೆಯದೇ ಇದ್ದಲ್ಲಿ, ಸರ್ಕಾರಿ ಆದೇಶದ ಉಲ್ಲಂಘನೆಯಾಗುವುದಿಲ್ಲವೇ ; ಹಾಗಿದ್ದಲ್ಲಿ, ಅನಧಿಕೃತ ಕಟ್ಟಡಕ್ಕೆ ಅನುಮತಿ ನೀಡಿರುವ ಅಧಿಕಾರಿಗಳ ಮೇಲೆ ಹಾಗೂ ಕಟ್ಟಡ ಮಾಲೀಕರ ಮೇಲೆ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಮಾರಪ್ಪ ಬಡಾವಣೆಗೆ ಮೂಲಭೂತ ಸೌಕರ್ಯ ಕಲ್ಪಿಸುವ ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೮೧೫ (೯೨೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜರಾಜೇಶ್ವರಿನಗರ ಸಭೆ ವ್ಯಾಪ್ತಿಗೆ ಒಳಪಡುವ ಹೊಸಕೆರೆಹಳ್ಳಿ, ಕೆರೆಕೋಡಿ ಮಾರ್ಗವಾಗಿ ಜವರಯ್ಯನದೊಡ್ಡಿ ಮೂಲಕ ರಾಜರಾಜೇಶ್ವರಿನಗರಕ್ಕೆ ಹೋಗುವ ದರ್ಶನ್ ಫಾರಂ ರಸ್ತೆಯಲ್ಲಿ

ಹೊಸದಾಗಿ ನಿರ್ಮಾಣವಾಗಿರುವ ಮಾರಪ್ಪ ಬಡಾವಣೆಯ ಮುಖ್ಯ ರಸ್ತೆಯಲ್ಲಿ ೧೦ ಅಡ್ಡರಸ್ತೆಗಳಿದ್ದು, ಅಲ್ಲಿನ ನಿವಾಸಿಗಳಿಗೆ ಯಾವುದೇ ಮೂಲಭೂತ ಸೌಲಭ್ಯಗಳನ್ನು ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ದರ್ಶನ್ ಫಾರಂ ರಸ್ತೆಯಲ್ಲಿರುವ ಮಾರಪ್ಪ ಬಡಾವಣೆಯ ನಿವೇಶನಗಳು ಸರ್ವೆ ನಂ. ೩೩ ಹಾಗೂ ೩೩/೧ಕ್ಕೆ ಸೇರಿದವುಗಳಾಗಿದ್ದು, ಅಲ್ಲಿನ ನಿವಾಸಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ಅಡ್ಡರಸ್ತೆಗಳಿಗೆ ನಂಬರ್ ಹಾಗೂ ಡಾಂಬರೀಕರಣಗಳನ್ನು ಯಾವಾಗ ಮಾಡಲಾಗುವುದು ;

(ಇ) ಈ ಮಾರಪ್ಪ ಬಡಾವಣೆಗೆ ರಸ್ತೆಗಳ ಅಗಲೀಕರಣ ಮಾಡಿ ಬಸ್ ಸೌಕರ್ಯ ಕಲ್ಪಿಸಲಾಗುವುದು ಯಾವಾಗ ;

(ಈ) ಮಾರಪ್ಪ ಬಡಾವಣೆಯಲ್ಲಿರುವ ರಸ್ತೆಯ ಎಡಭಾಗಕ್ಕೆ ಮಾವಿನ ತೋಪು ಇದ್ದು, ಸೀಮೆ ಹುಲ್ಲುಗಳು ಹುಲುಸಾಗಿ ಬೆಳೆದು ನಿಂತಿರುವುದರಿಂದ ಹೆಂಗಸರು ಮತ್ತು ಮಕ್ಕಳು ರಾತ್ರಿ ವೇಳೆಯಲ್ಲಿ ಓಡಾಡಲು ಹೆದರುತ್ತಿದ್ದು, ಆ ಪ್ರದೇಶಕ್ಕೆ ರಕ್ಷಣೆ ವ್ಯವಸ್ಥೆಯನ್ನು ಮಾಡಲಾಗುವುದೇ ಹಾಗೂ ಬ್ಯಾರಿಕೇಡ್‌ನ್ನು ಹಾಕಿ ಪ್ರತಿದಿನ ಪೊಲೀಸ್ ರಕ್ಷಣೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದೇ ;

(ಉ) ಇಲ್ಲಿನ ಪ್ರದೇಶದ ಅಡ್ಡರಸ್ತೆಗಳಿಗೆ ನಂಬರ್‌ಗಳಿಲ್ಲದೆ, ನಿವಾಸಿಗಳ ಮನೆಗೆ ಅಂಚೆ ವ್ಯವಸ್ಥೆ ಕೂಡ ಲಭ್ಯವಿಲ್ಲದೆ ಹಾಗೂ (ಬಿ.ಎಸ್.ಎನ್.ಎಲ್) ದೂರವಾಣಿ ಕೇಬಲಿಂಗ್ ಮಾಡದಿರುವುದರಿಂದ ಅಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವಾಗ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು ?

## ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಸಂತ್ರಸ್ತೆಯರಿಗೆ ಪರಿಹಾರ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೮೧೬ (೫೪೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫, ೨೦೧೫–೧೬ ಮತ್ತು ೨೦೧೬–೧೭ನೇ ಸಾಲುಗಳಲ್ಲಿ ರಾಜ್ಯದಲ್ಲಿ ಮಹಿಳೆಯರ ಮೇಲೆ ಎಷ್ಟು ಲೈಂಗಿಕ ಮತ್ತು ಇನ್ನಿತರೆ ದೌರ್ಜನ್ಯಗಳು ನಡೆದಿವೆ ; ಅಂತಹ ಎಷ್ಟು ಪ್ರಕರಣಗಳಲ್ಲಿ ಕ್ರಿಮಿನಲ್ ಕೇಸನ್ನು ದಾಖಲು ಮಾಡಲಾಗಿದೆ ; (ಪ್ರಕರಣವಾರು ವಿವರವನ್ನು ನೀಡುವುದು)

(ಆ) ಲೈಂಗಿಕ ದೌರ್ಜನ್ಯಕ್ಕೊಳಗಾದ ಎಷ್ಟು ಜನ ಸಂತ್ರಸ್ತೆಯರಿಗೆ ಎಷ್ಟೆಷ್ಟು ಪರಿಹಾರವನ್ನು ನೀಡಲಾಗಿದೆ ; (ಪ್ರಕರಣವಾರು ವಿವರ ನೀಡುವುದು)

(ಇ) ಸಂತ್ರಸ್ತೆಯರಿಗೆ ಪರಿಹಾರ ನೀಡಲು ಕೇಂದ್ರ ಸರ್ಕಾರ ರೂಪಿಸಿರುವ "ನಿರ್ಭಯ ನಿಧಿ" ಯಿಂದ ಎಷ್ಟು ಹಣವನ್ನು ಪಡೆದುಕೊಳ್ಳಲಾಗಿದೆ ; ಮತ್ತು ಎಷ್ಟು ಹಣವನ್ನು ವಿತರಿಸಲಾಗಿದೆ ? (ವರ್ಷಾವಾರು ಮತ್ತು ಪ್ರಕರಣವಾರು ಮಾಹಿತಿ ನೀಡುವುದು)

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿನ ವಸತಿ/ವಸತಿಯೇತರ ಪ್ರದೇಶ/ ಕಟ್ಟಡಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೮೧೭ (೫೪೫) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಒಟ್ಟು ಪ್ರದೇಶದ ವಿಸ್ತೀರ್ಣವೆಷ್ಟು ;

(ಆ) ಈ ಪ್ರದೇಶದಲ್ಲಿ ಸರ್ಕಾರದ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳು ವಸತಿ ಉದ್ದೇಶಕ್ಕಾಗಿ ನಿರ್ಮಾಣ ಮಾಡಿರುವ ಬಡಾವಣೆಗಳೆಷ್ಟು ; ಅವು ಯಾವುವು ;

(ಇ) ಆ ಬಡಾವಣೆಗಳ ವಸತಿ ಮತ್ತು ವಸತಿಯೇತರ ಉದ್ದೇಶಕ್ಕಾಗಿ ಮೀಸಲಿಡಲಾದ ನಿವೇಶನಗಳೆಷ್ಟು ; (ನಿವೇಶನವಾರು ಮತ್ತು ಬಡಾವಣೆವಾರು ವಿವರ ನೀಡುವುದು)

(ಈ) ನಿಯಮಗಳಿಗೆ ವಿರುದ್ಧವಾಗಿ ಕಟ್ಟಡಗಳನ್ನು (ವಸತಿ/ವಸತಿಯೇತರ) ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಎಷ್ಟು ಕಟ್ಟಡಗಳನ್ನು ಆ ರೀತಿ ನಿರ್ಮಿಸಲಾಗಿದೆ ; ಇದುವರೆಗೆ ಎಷ್ಟು ಕಟ್ಟಡಗಳ ಮಾಲೀಕರ ವಿರುದ್ಧ ಸರ್ಕಾರ ಕ್ರಮಗಳನ್ನು ತೆಗೆದುಕೊಂಡಿದೆ ? (ಬಡಾವಣೆವಾರು/ಮಾಲೀಕರ ಹೆಸರು, ವಿಳಾಸ ಸಮೇತ ವಿವರ ನೀಡುವುದು)

## ವಿವಿಧ ಬಗೆಯ ಕ್ರಿಮಿನಲ್ ಕೇಸುಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೮೧೮ (೫೪೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬, ೨೦೧೬–೧೭ ಹಾಗೂ ೨೦೧೭–೧೮ನೇ ಸಾಲುಗಳಲ್ಲಿ ರಾಜ್ಯದಲ್ಲಿ ದಾಖಲಾಗಿರುವ ವಿವಿಧ ಬಗೆಯ ಕ್ರಿಮಿನಲ್ ಕೇಸುಗಳ ಸಂಖ್ಯೆ ಎಷ್ಟು ; ಅವು ಯಾವುವು ; (ವಿವರ ನೀಡುವುದು)

(ಆ) ಆ ಕೇಸುಗಳ ಪೈಕಿ ಎಷ್ಟರಲ್ಲಿ ೯೦ ದಿನಗಳೊಳಗೆ, ಒಂದು ವರ್ಷದ ಒಳಗೆ ಹಾಗೂ ಒಂದು ವರ್ಷದ ನಂತರ ಚಾರ್ಜ್‌ಶೀಟ್ ಹಾಕಲಾಗಿದೆ ; ಎಷ್ಟು ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ಹಾಕಿರುವುದಿಲ್ಲ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಚಾರ್ಜ್‌ಶೀಟ್ ಹಾಕಿದ ಎಷ್ಟು ಪ್ರಕರಣಗಳಲ್ಲಿ ವಿಚಾರಣೆ ಮುಗಿದಿದೆ ; ಎಷ್ಟು ಪ್ರಕರಣಗಳಲ್ಲಿ ಇದುವರೆವಿಗೆ ವಿಚಾರಣೆ ಪ್ರಾರಂಭವಾಗಿರುವುದಿಲ್ಲ ; (ತಾಲ್ಲೂಕುವಾರು/ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಶಿಕ್ಷೆಯಾಗದಿರುವ ಎಷ್ಟು ಪ್ರಕರಣಗಳಲ್ಲಿ ಅಪೀಲನ್ನು ದಾಖಲು ಮಾಡಲಾಗಿದೆ ? (ತಾಲ್ಲೂಕುವಾರು/ಜಿಲ್ಲಾವಾರು ವಿವರ ನೀಡುವುದು)

## ಪೋಕ್ಸೋ ಕಾಯ್ದೆಯಡಿ ದಾಖಲಾದ ಪ್ರಕರಣಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೮೧೯ (೫೪೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ೨೦೧೫–೧೬, ೨೦೧೬–೧೭ ಮತ್ತು ೨೦೧೭–೧೮ನೇ ಸಾಲುಗಳಲ್ಲಿ ಪೋಕ್ಸೋ ಕಾಯ್ದೆಯಡಿ ಮತ್ತು ಭಾರತೀಯ ದಂಡ ಸಂಹಿತೆ ಕಲಂ ೩೭೬ರ ಅಡಿ ಎಷ್ಟು ಪ್ರಕರಣಗಳು ದಾಖಲಾಗಿವೆ ;

(ಆ) ಆ ಪ್ರಕರಣಗಳ ಪೈಕಿ ಎಷ್ಟರಲ್ಲಿ ಚಾರ್ಜ್‌ಶೀಟ್ ಹಾಕಲಾಗಿದೆ ; ಎಷ್ಟು ಪ್ರಕರಣಗಳು ಇತ್ಯರ್ಥಗೊಂಡಿವೆ ; ಎಷ್ಟು ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಗೊಂಡಿರುತ್ತಾರೆ ; ಎಷ್ಟು ಜನರಿಗೆ ಶಿಕ್ಷೆಯಾಗಿರುತ್ತದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಎಷ್ಟು ಪ್ರಕರಣಗಳಲ್ಲಿ ಸಂತ್ರಸ್ತೆಯರಿಗೆ ಪರಿಹಾರ ನೀಡಲಾಗಿದೆ ; ಎಷ್ಟು ಮೊಬಲುಗಳನ್ನು ಪರಿಹಾರವಾಗಿ ನೀಡಲಾಗಿದೆ ? (ಪ್ರಕರಣವಾರು ವಿವರ ನೀಡುವುದು)

## ಚಿಲ್ಲರೆ ಮದ್ಯ ಮಾರಾಟ ಮತ್ತು ಐ.ಎಂ.ಎಫ್.ಎಲ್. ಮಾರಾಟ ಮಳಿಗೆಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೮೨೦ (೫೪೩) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಗ್ರಾಮ, ಪಟ್ಟಣ ಮತ್ತು ನಗರಗಳಲ್ಲಿ ಸಿ.ಎಲ್–೨ (ಚಿಲ್ಲರೆ ಮಾರಾಟ ಮಳಿಗೆ) ಮುಂತಾದ ಮದ್ಯ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ ; ಅವುಗಳು ಯಾರ ಹೆಸರಿನಲ್ಲಿವೆ ; (ವಿವರ ನೀಡುವುದು)

(ಆ) ಭಾರತೀಯ ತಯಾರಿಕಾ ವಿದೇಶಿ ಮದ್ಯ (Indian Manufacture Liquor)ವನ್ನು ಯಾವ ಯಾವ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ ; ಪ್ರತಿ ತಿಂಗಳು ಎಷ್ಟು ಪ್ರಮಾಣದ ಮದ್ಯವನ್ನು ಮಾರಾಟ ಮಾಡಲಾಗುತ್ತಿದೆ ; (ಮಳಿಗೆವಾರು ವಿವರ ನೀಡುವುದು)

(ಇ) ಭಾ.ತ.ವಿ.ಮ (I.M.F.L) ಮಾರಾಟ ಮಾಡುವ ಸನ್ನದುದಾರರಿಗೆ ದೊರೆಯಬಹುದಾದ ಕಮೀಷನ್ ಮೊತ್ತವೆಷ್ಟು ? (ಮಳಿಗೆವಾರು ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ೩ ವರ್ಷಗಳಲ್ಲಿ ಅಪಘಾತ ಸಂಭವಿಸಿರುವ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೨೧ (೯೪೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಸಂಭವಿಸಿರುವ ಅಪಘಾತಗಳ ಸಂಖ್ಯೆ ಎಷ್ಟು ; ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು ;

(ಆ) ಬೀದರ್ ಜಿಲ್ಲೆಯ ಮೂಲಕ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೯ರ ಮೇಲೆ ಅತಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಪಘಾತಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ೨೪X೭ ನೀರು ಪೂರೈಕೆ ಯೋಜನೆಯಡಿ ಬೀದರ್ ನಗರಕ್ಕೆ ನೀರು ಪೂರೈಕೆ ಮಾಡುವ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೨೨ (೯೪೪) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೪X೭ ನೀರು ಪೂರೈಕೆ ಯೋಜನೆಯಡಿ ಬೀದರ್ ನಗರದ ಎಷ್ಟು ವಾರ್ಡ್‌ಗಳಿಗೆ ನಿರಂತರ ನೀರು ಪೂರೈಕೆ ಮಾಡಲಾಗುತ್ತಿದೆ ; ಇನ್ನೂ ಎಷ್ಟು ವಾರ್ಡ್‌ಗಳಿಗೆ ನೀರು ಪೂರೈಕೆ ಮಾಡುವುದು ಬಾಕಿ ಇದೆ ; ಎಷ್ಟು ವಾರ್ಡ್‌ಗಳಲ್ಲಿ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ ;

(ಆ) ನೀರು ಪೂರೈಕೆ ಯೋಜನೆಗೆ ಮಾಡಿದ ವೆಚ್ಚ ಎಷ್ಟು ; ಹಾಗೂ ಯೋಜನೆ ಪೂರ್ಣಗೊಂಡಿದೆಯೇ ;

(ಇ) ಬೀದರ್ ನಗರದಲ್ಲಿ ನಡೆಯುತ್ತಿರುವ ಒಳಚರಂಡಿ ಕಾಮಗಾರಿ ಎಷ್ಟು ವಾರ್ಡ್‌ಗಳಲ್ಲಿ ಪೂರ್ಣಗೊಂಡಿದೆ ; ಇನ್ನು ಎಷ್ಟು ವಾರ್ಡ್‌ಗಳಲ್ಲಿ ಕಾಮಗಾರಿ ನಡೆಯುತ್ತಿದೆ ; ಎಷ್ಟು ವಾರ್ಡ್‌ಗಳಲ್ಲಿ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸಲಾಗಿದೆ ; ಇನ್ನು ಎಷ್ಟು ಮನೆಗಳಿಗೆ ಸಂಪರ್ಕ ಕಲ್ಪಿಸುವುದು ಬಾಕಿ ಇದೆ ? (ವಿವರ ನೀಡುವುದು)

## ಸ್ವಾಯತ್ತ ಸಂಸ್ಥೆ ಹಾಗೂ ನಿಗಮ ಮಂಡಳಿಗಳಲ್ಲಿ C & R ಅಳವಡಿಸುವ ಬಗ್ಗೆ

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೩ (೧೦೧೬) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರದ ಅಡಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳು ಹಾಗೂ ನಿಗಮ ಮಂಡಳಿಗಳ ಸಂಖ್ಯೆ ಎಷ್ಟು ;

(ಆ) ಸ್ವಾಯತ್ತ ಸಂಸ್ಥೆ ಹಾಗೂ ನಿಗಮ ಮಂಡಳಿಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲಾಗಿದೆಯೇ ; ಅಳವಡಿಸದೆ ಇರುವ ಸ್ವಾಯತ್ತ ಸಂಸ್ಥೆ ಹಾಗೂ ನಿಗಮ ಮಂಡಳಿಗಳ ಹೆಸರು ಮತ್ತು ವಿಳಾಸ ನೀಡುವುದು ;

(ಇ) ಹೀಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಅಳವಡಿಸಿದ್ದಲ್ಲಿ, ಎಸ್.ಸಿ/ಎಸ್.ಟಿ.ಗಳಿಗೆ ಬಡ್ತಿಯಲ್ಲಿ ಮೀಸಲಾತಿ ಅವಕಾಶ ಕಲ್ಪಿಸಲಾಗಿದೆಯೇ ;

(ಈ) ಮೀಸಲಾತಿ ಅಳವಡಿಸದೆ ಇರುವ ನಿಗಮ ಮಂಡಳಿಗಳ ಹಾಗೂ ಸ್ವಾಯತ್ತ ಸಂಸ್ಥೆಗಳ ಹೆಸರು ಮತ್ತು ವಿಳಾಸ ನೀಡುವುದು ?

## ವಿಜಯಪುರದಲ್ಲಿ ದಲಿತ ಬಾಲಕಿ ಹತ್ಯೆ ಕುರಿತು

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೪ (೧೦೧೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರದ ದಲಿತ ಬಾಲಕಿ ದಾನಮ್ಮ ಇವರ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆಯಲ್ಲಿ ಎಷ್ಟು ಜನ ಆರೋಪಿಗಳು ಭಾಗಿಯಾಗಿದ್ದಾರೆ ; ಎಷ್ಟು ಆರೋಪಿಗಳನ್ನು ಬಂಧಿಸಲಾಗಿದೆ ; ಇನ್ನು ಎಷ್ಟು ಆರೋಪಿಗಳನ್ನು ಬಂಧಿಸಬೇಕಾಗಿದೆ ; (ಹೆಸರು ಮತ್ತು ವಿಳಾಸ ನೀಡುವುದು)

(ಆ) ದಾನಮ್ಮ ಕುಟುಂಬದವರಿಗೆ ಸರ್ಕಾರದಿಂದ ಯಾವ ಯಾವ ಸೌಲಭ್ಯಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ನೀಡಲಾಗಿದೆ ;

(ಇ) ಆ ಕುಟುಂಬದವರಿಗೆ ಸರ್ಕಾರಿ ಉದ್ಯೋಗ ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಭೂ ಖರೀದಿ ಯೋಜನೆ ಅಡಿಯಲ್ಲಿ ಜಮೀನನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

## ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡಿರುವ ಬಗ್ಗೆ

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೫ (೧೦೧೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ವಿವಿಧ ಇಲಾಖೆ/ನಿಗಮ/ಮಂಡಳಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ;

(ಆ) ಈ ಹುದ್ದೆಗಳಲ್ಲಿ ನೇಮಕ ಮಾಡಿಕೊಂಡಿರುವ ಅಧಿಕಾರಿ/ನೌಕರರಿಗೆ ಎಷ್ಟು ವೇತನ ನೀಡಲಾಗುತ್ತಿದೆ ; (ವೃಂದವಾರು ವಿವರ ನೀಡುವುದು)

(ಇ) ಗುತ್ತಿಗೆ ಏಜೆನ್ಸಿಗಳ ಮುಖಾಂತರ ಗುತ್ತಿಗೆದಾರರಿಗೆ ನೀಡುತ್ತಿರುವ ಪ್ರತಿ ಹುದ್ದೆಗಳಿಗೆ ನಿಗಧಿಪಡಿಸಿರುವ ವೇತನ ಎಷ್ಟು ; ಗುತ್ತಿಗೆದಾರರು ನೌಕರರಿಗೆ ನೀಡುತ್ತಿರುವ ವೇತನ ಎಷ್ಟು ?

## ಪೌರ ಕಾರ್ಮಿಕ ಸಮಸ್ಯೆಗಳ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೮೨೬ (೧೦೧೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನಗರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು ; ಇವರಿಗೆ ನೀಡುತ್ತಿರುವ ವೇತನ ಎಷ್ಟು ;(ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಗುತ್ತಿಗೆ ನೌಕರರನ್ನು ಖಾಯಂ ನೌಕರರೆಂದು ಪರಿಗಣಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ; ಹಾಗಿದ್ದಲ್ಲಿ, ಎಷ್ಟು ಮಂದಿ ನೌಕರರನ್ನು ಖಾಯಂಗೊಳಿಸಲಾಗಿದೆ ; ಈ ಬಗ್ಗೆ ತೆಗೆದುಕೊಂಡ ನಿರ್ಣಯಗಳೇನು ;

(ಇ) ಬಳ್ಳಾರಿ ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ; ಅವರಿಗೆ ಗುತ್ತಿಗೆದಾರರು ನೀಡುತ್ತಿರುವ ವೇತನ ಎಷ್ಟು ;

(ಈ) ಗುತ್ತಿಗೆದಾರರು ಪ್ರತಿ ತಿಂಗಳು ೨೬ ದಿನಗಳು ಮಾತ್ರ ವೇತನ ನೀಡುತ್ತಿರುವುದು, ಭಾನುವಾರಗಳ ವೇತನ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಇದು ಕಾರ್ಮಿಕ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿಲ್ಲವೇ ; ಈ ಬಗ್ಗೆ ಯಾವ ಕ್ರಮ ಜರುಗಿಸಲಾಗುವುದು ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಾಗಗಳ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೮೨೭ (೧೦೧೨) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಒಟ್ಟು ವಿಧಾನ ಸಭಾ ಕ್ಷೇತ್ರಗಳು ಎಷ್ಟು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಸದರಿ ಕ್ಷೇತ್ರಗಳಲ್ಲಿ ಇರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖಾಲಿ ಜಾಗಗಳ ಸಂಖ್ಯೆ ಎಷ್ಟು ; (ಖಾಲಿ ಇರುವ ಜಾಗಗಳ ವಿಳಾಸ ಸಮೇತ ವಿವರ ಒದಗಿಸುವುದು)

(ಇ) ಸದರಿ ಕ್ಷೇತ್ರಗಳಲ್ಲಿ ಯಾವುದಾದರೂ ಖಾಲಿ ಜಾಗಗಳನ್ನು ಗುತ್ತಿಗೆ ನೀಡಿದ್ದಲ್ಲಿ ಅದರ ವಾರ್ಷಿಕ ಆದಾಯ ಮತ್ತು ಆ ಜಾಗದ ಗುತ್ತಿಗೆ ಅವಧಿಯನ್ನು ತಿಳಿಸುವುದು ?

## ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೮೨೮ (೧೦೧೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ; (ಅವರ ಹೆಸರು ಸಮೇತ ಮಾಹಿತಿ ನೀಡುವುದು)

(ಆ) ಈ ಪೌರ ಕಾರ್ಮಿಕರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಯಂ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಯಾವಾಗ ಖಾಯಂಗೊಳಿಸಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ಹೈದರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳಲ್ಲಿ ಆಯ–ವ್ಯಯದಲ್ಲಿ ಒದಗಿಸಲಾದ ಅನುದಾನದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೨೯ (೧೦೦೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳಲ್ಲಿ ಹಾಗೂ ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ಆಯವ್ಯಯದಲ್ಲಿ ವಿವಿಧ ಯೋಜನೆಯಡಿ ಕಳೆದ ೩ ವರ್ಷದಲ್ಲಿ ಒದಗಿಸಲಾದ ಅನುದಾನವೆಷ್ಟು ; (ವರ್ಷವಾರು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಜಿಲ್ಲೆಗಳಲ್ಲಿ ಆಯವ್ಯಯದ ಇತರೆ ಯೋಜನೆಯಡಿಯಲ್ಲಿ ಒದಗಿಸಲಾದ ಅನುದಾನ ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನದ ಮೊತ್ತವೆಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಹೊರಡಿಸಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೩೦ (೧೦೫೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕದ ೬ ಜಿಲ್ಲೆಗಳಲ್ಲಿ ೩೭೧(ಜೆ) ಅಡಿಯಲ್ಲಿ ಕಳೆದ ೨ ವರ್ಷಗಳಿಂದ ಖಾಲಿ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಹೊರಡಿಸಿ ನೇಮಕಾತಿ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಸರ್ಕಾರಿ ಹಾಗೂ ಅರೆ ಸರ್ಕಾರಿ ಇಲಾಖೆಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ೩೭೧ (ಜೆ) ಅಡಿಯಲ್ಲಿರುವ ವೃಂದವಾರು ಹುದ್ದೆಗಳನ್ನು ಗುರ್ತಿಸಿ ಅಧಿಸೂಚನೆಯನ್ನು ಹೊರಡಿಸುವಲ್ಲಿ ವಿಫಲವಾಗಿದ್ದು, ಅಧಿಸೂಚನೆಯಲ್ಲಿ ವಿಫಲವಾದ ಸರ್ಕಾರಿ ಹಾಗೂ ಅರೆ ಸರ್ಕಾರಿ ಇಲಾಖೆಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ೩೭೧ (ಜೆ) ಅಡಿಯ ಮೀಸಲಾತಿಯಲ್ಲಿ ನೇಮಕಾತಿ ಹಾಗೂ ಮುಂಬಡ್ತಿಯಲ್ಲಿ ಆಗುತ್ತಿರುವ ಗೊಂದಲ ಹಾಗೂ ವಿಳಂಬ ಸರ್ಕಾರದ ಗಮನಕ್ಕೆ ಬಂದಿದೆಯೇ ; (ಮಾಹಿತಿ ನೀಡುವುದು)

(ಈ) ಸದರಿ ನೇಮಕಾತಿ ಹಾಗೂ ಮುಂಬಡ್ತಿಯಲ್ಲಿ ಗೊಂದಲ ಹಾಗೂ ವಿಳಂಬ ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು ಹಾಗೂ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ "ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್" ಹುದ್ದೆಗಳು ಖಾಲಿ ಇರುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೩೧ (೧೦೦೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳು ಖಾಲಿ ಇರುವುದರಿಂದ ನ್ಯಾಯಾಲಯದಲ್ಲಿರುವ ಪ್ರಕರಣಗಳು ವಿಳಂಬವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಖಾಲಿ ಇರುವ ಹುದ್ದೆಗಳ ಸಂಖ್ಯೆ ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಖಾಲಿ ಇರುವ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಗೂ ಇತರೆ ಹುದ್ದೆಗಳನ್ನು ಭರ್ತಿಗಾಗಿ ಇಲಾಖೆಯು ನೇಮಕಾತಿ ಮಂಡಳಿ ರಚಿಸಿದೆಯೇ ; ಖಾಲಿ ಇರುವ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಆದೇಶ ಹೊರಡಿಸಲಾಗಿದೆ ; ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆಯೇ ; (ಮಾಹಿತಿ ನೀಡುವುದು)

(ಇ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಸ್ಥಳೀಯ ಅರ್ಹ ವಕೀಲರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದರೆ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಗೂ ಇತರೆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ನೇಮಕಾತಿ ಮಾಡಿಕೊಳ್ಳಲಾಗುವುದು?

## ೩೭೧ (ಜೆ) ಪ್ರಕಾರ ಗೃಹ ಇಲಾಖೆಯಲ್ಲಿನ ಹುದ್ದೆಗಳಿಗೆ ಮೀಸಲಾತಿ ಕಲ್ಪಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೩೨ (೧೦೫೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಂವಿಧಾನದ ಕಲಂ ೩೭೧ (ಜೆ) ಪ್ರಕಾರ ಗೃಹ ಇಲಾಖೆಯಲ್ಲಿನ ಪಿ.ಎಸ್.ಐ. ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಡಿ.ಎಸ್.ಪಿ. ಹುದ್ದೆಗಳಿಗೆ ಮೀಸಲಾತಿ ಕಲ್ಪಿಸಲಾಗಿದೆಯೇ ; ಇದ್ದರೆ, ಮೀಸಲಾತಿ ಕಲ್ಪಿಸಿದ ಹುದ್ದೆಗಳ ಸಂಪೂರ್ಣ ಮಾಹಿತಿ ನೀಡುವುದು ;

(ಆ) ಸಂವಿಧಾನದ ಕಲಂ ೩೭೧(ಜೆ) ಪ್ರಕಾರ ಗೃಹ ಇಲಾಖೆಯಲ್ಲಿನ ಪಿ.ಎಸ್.ಐ. ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಡಿ.ಎಸ್.ಪಿ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿದೆಯೇ; ಇದ್ದರೆ, ಮುಂಬಡ್ತಿಗೆ ಅರ್ಹರಿರುವ ಪಿ.ಎಸ್.ಐ ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಡಿ.ಎಸ್.ಪಿ. ಹುದ್ದೆಗಳ ಪಟ್ಟಿ ನೀಡುವುದು;

(ಇ) ಸಂವಿಧಾನದ ಕಲಂ ೩೭೧ (ಜೆ) ಪ್ರಕಾರ ಗೃಹ ಇಲಾಖೆಯಲ್ಲಿ ಪಿ.ಎಸ್.ಐ. ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಡಿ.ಎಸ್.ಪಿ. ಹುದ್ದೆಗಳಿಗೆ ಮುಂಬಡ್ತಿ ನೀಡಲು ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮವೇನು ಹಾಗೂ ಯಾವ ಕಾಲಮಿತಿಯೊಳಗೆ ಮುಂಬಡ್ತಿ ನೀಡಲಾಗುವುದು? (ಮಾಹಿತಿ ನೀಡುವುದು)

## ಭ್ರಷ್ಟಾಚಾರ ನಿಗ್ರಹದಳ ಅಧಿಕಾರಿಗಳಿಂದ ಸರ್ಕಾರಿ ಅಧಿಕಾರಿಗಳ ನಿವಾಸಗಳ ಮೇಲಿನ ದಾಳಿಗಳ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೮೩೩ (೯೭೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೪ ವರ್ಷದಲ್ಲಿ ಭ್ರಷ್ಟಾಚಾರ ನಿಗ್ರಹದಳ ಅಧಿಕಾರಿಗಳು ರಾಜ್ಯದ ಎಷ್ಟು ಮಂದಿ ಸರ್ಕಾರಿ ಅಧಿಕಾರಿಗಳ ನಿವಾಸ ಮತ್ತು ಕಛೇರಿಗಳ ಮೇಲೆ ದಾಳಿ ನಡೆಸಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಇದರಲ್ಲಿ ಎಷ್ಟು ಅಘೋಷಿತ ಆಸ್ತಿ ಮತ್ತು ಹಣ ವಶಪಡಿಸಿಕೊಳ್ಳಲಾಗಿದೆ;

(ಇ) ಈ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕಠಿಣ ಕ್ರಮವೇನು ?

# ವಿವಿಧ ಯೋಜನೆಯಡಿ ವಸತಿ ಹೀನರಿಗೆ ಮನೆ ಮಂಜೂರು ಕುರಿತು

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೩೪ (೫೪೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ನೇ ಸಾಲಿನಿಂದ ೨೦೧೭–೧೮ನೇ ಸಾಲಿನವರೆಗೆ ಕಾರವಾರ ಜಿಲ್ಲೆಯಲ್ಲಿ ನಗರ ಸಭೆ/ಪಟ್ಟಣ ಪಂಚಾಯಿತಿ ವತಿಯಿಂದ ಆಶ್ರಯ, ಬಸವ ವಸತಿ ರಾಜೀವ ಗಾಂಧಿ ವಸತಿ ಯೋಜನೆಯಡಿ ಯಾವ ಯಾವ ಮನೆಗಳು ಮಂಜೂರಾಗಿರುತ್ತವೆ ; (ಜಿಲ್ಲಾವಾರು/ತಾಲ್ಲೂಕುವಾರು ವಿವರ ನೀಡುವುದು)

(ಆ) ಮಂಜೂರಾತಿ ನೀಡಿರುವ ಮನೆಗಳ ಹಂಚಿಕೆ ಮಾಡುವಲ್ಲಿ, ಅನುಸರಿಸಬೇಕಾದ ಮಾನದಂಡವೇನು ; (ವಿವರ ನೀಡುವುದು)

(ಇ) ಸದರಿ ಯೋಜನೆಯಡಿ ಮಂಜೂರು ನೀಡಿರುವ ಆಶ್ರಯ ಮನೆ ಕೆಲವೊಂದು ಕಡೆ ಮನೆ ಇದ್ದವರಿಗೆ ಮತ್ತೆ ಬೇರೆ ಬೇರೆ ಹೆಸರಿನಲ್ಲಿ ಮನೆ ಮಂಜೂರು ನೀಡಿದ್ದು, ಈ ಬಗ್ಗೆ ಸರ್ಕಾರ ಕೂಲಂಕುಷವಾಗಿ ತನಿಖೆ ನಡೆಸುವುದೇ ; (ವಿವರ ನೀಡುವುದು)

(ಈ) ಜಿಲ್ಲೆಯಲ್ಲಿ ೨೦೧೩–೧೪ನೇ ಸಾಲಿನಿಂದ ೨೦೧೭–೧೮ನೇ ಸಾಲಿನವರೆಗೆ ವಿವಿಧ ಯೋಜನೆಯಡಿ ಮಂಜೂರು ಮಾಡಿರುವ ಮನೆಗಳಲ್ಲಿ ಹಂಚಿಕೆ ಮಾಡಿದ ಮನೆಗಳೆಷ್ಟು ? (ಹೆಸರು, ವಿಳಾಸದೊಂದಿಗೆ ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು)

# ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿರುವ ನಗರಸಭೆ, ಪಟ್ಟಣ ಪಂಚಾಯತ್ ಮುಂತಾದವುಗಳಿಗೆ ಒದಗಿಸಲಾದ ಅನುದಾನ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೩೫ (೫೪೯) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ೨೦೧೪–೧೫ನೇ ಸಾಲಿನಿಂದ ೨೦೧೭–೧೮ನೇ ಸಾಲಿನವರೆಗೆ ವಿವಿಧ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; ಹಾಗೂ ಸದರಿ ಕಾಮಗಾರಿಗಳಿಗಾಗಿ ಖರ್ಚಾದ ಹಣವೆಷ್ಟು ; (ಜಿಲ್ಲಾವಾರು/ ತಾಲ್ಲೂಕುವಾರು ವಿವರ ನೀಡುವುದು)

(ಆ) ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಕೆಲವೊಂದು ಕಾರ್ಯಕ್ರಮಗಳಿಗೆ ಅನುದಾನ ಬಳಕೆ ಮಾಡಿರುವುದು ನಿಜವೇ ; ಹಾಗಿದ್ದಲ್ಲಿ ಯಾವ ಕಾರ್ಯಕ್ರಮಗಳಿಗೆ ಮತ್ತು ಯಾವ ಯಾವ ಸಲಕರಣೆ ಖರೀದಿಗೆ ಸಂಬಂಧಿಸಿದಂತೆ ಆಗಿರುವ ಖರ್ಚು ವೆಚ್ಚದ ಸವಿಸ್ತಾರ ವಿವರ ನೀಡುವುದು ;

(ಇ) ಕೆಲವೊಂದು ಕಡೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ವ್ಯಾಪ್ತಿಯ ಬೇರೆ ಬೇರೆ ಕಾರ್ಯಕ್ರಮದ ಹೆಸರಿನಲ್ಲಿ ಸಂಬಂಧಿಸಿದ ಅಧಿಕಾರಿ ಅನುದಾನ ದುರ್ಬಳಕೆ ಮಾಡಿರುವುದು ನಿಜವೇ ; ಹಾಗಿದ್ದಲ್ಲಿ, ಸರ್ಕಾರ ಈ ವಿಷಯದಲ್ಲಿ ಸೂಕ್ತ ತನಿಖೆ ನಡೆಸಲು ಕ್ರಮ ಕೈಗೊಂಡಿದೆಯೇ ? (ವಿವರ ನೀಡುವುದು)

## ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ ಸ್ಥಳಾವಕಾಶ ನೀಡುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೩೬ (೯೫೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ ಸ್ಥಳಾವಕಾಶ ಒದಗಿಸಿಕೊಡಲಾಗಿದೆಯೇ; ಎಷ್ಟು ಮಂದಿಗೆ ಬೀದಿ ಬದಿ ವ್ಯಾಪಾರಸ್ಥರಿಗೆ ವ್ಯಾಪಾರ ನಡೆಸಲು ಪರವಾನಿಗೆ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ನಗರಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಗೂಡಂಗಡಿಗಳಿಗೆ ಪರವಾನಿಗೆ ನೀಡಲಾಗಿದೆ ; (ವಾರ್ಡ್‌ವಾರು ವಿವರ ನೀಡುವುದು)

(ಇ) ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಗೂಡಂಗಡಿಗಳೆಷ್ಟು; ಈ ಗೂಡಂಗಡಿಗಳಿಗೆ ಪರವಾನಿಗೆ ನೀಡುವ ಅವಕಾಶ ಇದೆಯೇ; (ವಿವರ ನೀಡುವುದು)

(ಈ) ಗೂಡಂಗಡಿಗಳಲ್ಲಿ ಅಕ್ರಮವಾಗಿ ಮಾದಕ ದ್ರವ್ಯ ಮಾರುತ್ತಿರುವ ಬಗ್ಗೆ ದೂರುಗಳಿದ್ದು, ಈ ಬಗ್ಗೆ ನಗರಪಾಲಿಕೆ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಮಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಅನಧಿಕೃತ ಕ್ಲಬ್ ಜೂಜಾಟದ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೩೭ (೯೫೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ಕಮೀಷನರೇಟ್ ವ್ಯಾಪ್ತಿಯಲ್ಲಿ ಅನಧಿಕೃತ ಕ್ಲಬ್, ಜೂಜಾಟ, ಸ್ಕಿಲ್ ಗೇಮ್ ನಿರಂತರವಾಗಿ ನಡೆಯುತ್ತಿದ್ದರೂ ಇಲಾಖೆ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು ;

(ಆ) ಮಂಗಳೂರು ನಗರದ ವ್ಯಾಪ್ತಿಯ ಯಾವ ಯಾವ ಠಾಣೆಗಳಲ್ಲಿ ಎಷ್ಟು ಸ್ಕಿಲ್‌ಗೇಮ್, ಕ್ಲಬ್‌ಗಳನ್ನು ನಡೆಸಲು ಪರವಾನಗಿ ನೀಡಲಾಗಿದೆ ; ಅವುಗಳ ಬಗ್ಗೆ ಇಲಾಖೆಯ ಹತೋಟಿ ಏನು ;

(ಇ) ಕ್ಲಬ್ ಮತ್ತು ಅಕ್ರಮ ಸ್ಕಿಲ್ ಗೇಮ್‌ಗಳಲ್ಲಿ ನಿಯಮ ಮೀರಿ ಕಾರ್ಯನಿರ್ವಹಿಸುತ್ತಿದರಿಂದ, ಅಕ್ರಮ ಚಟುವಟಿಕೆಗಳಿಗೆ ಮತ್ತು ಕೊಲೆಗಳಿಗೆ ಕಾರಣಗಳಾಗಿದೆ ಎಂಬ ವರದಿಗಳಿದ್ದು, ಈ ಬಗ್ಗೆ ಗೃಹ ಇಲಾಖೆ ಬಿಂಬಲಿಸುತ್ತಿರುವುದು ಸರಿಯೇ ; (ವಿವರ ನೀಡುವುದು)

(ಈ) ಕ್ಲಬ್ ನಿಯಂತ್ರಿಸಲು ಇಲಾಖೆಗೆ ಸಾಧ್ಯವಾಗುತ್ತಿಲ್ಲ ಎಂಬ ದೂರುಗಳಿದ್ದು, ಇವುಗಳನ್ನು ನಿಯಂತ್ರಿಸಲು ಹೊಸ ಪಡೆಯನ್ನಾದರೂ ರಚಿಸಲಾಗಿದೆಯೇ ? (ವಿವರ ನೀಡುವುದು)

## ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ರಚಿಸಿರುವ ಕಟ್ಟಡಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೩೮ (೯೯೭) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ರಚಿಸಿರವ ಕಟ್ಟಡಗಳನ್ನು ಸಕ್ರಮಗೊಳಿಸುವ ಬಗ್ಗೆ ಇಲಾಖೆ ಕ್ರಮ ಕೈಗೊಂಡಿದೆಯೇ ; ಎಷ್ಟು ಕಟ್ಟಡ ಸಕ್ರಮಗೊಳಿಸಲಾಗಿದೆ ;

ಇದರಿಂದ ಮಹಾನಗರ ಪಾಲಿಕೆಗೆ ಬಂದ ಆದಾಯ ಎಷ್ಟು ; (ವಿವರ ನೀಡುವುದು)

(ಆ) ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಅನಧಿಕೃತ ಜಾಹೀರಾತು ಬೋರ್ಡ್‌ಗಳಿವೆ ; ನಗರ ಪಾಲಿಕೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಅಕ್ರಮವಾಗಿ ಜಾಹೀರಾತು ಬೋರ್ಡ್ ಅಳವಡಿಸಿದ ಜಾಹೀರಾತು ಸಂಸ್ಥೆಗಳಾವವು ; (ವಿವರ ನೀಡುವುದು)

(ಈ) ನಗರಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ; ಭರ್ತಿ ಮಾಡಲು ಇಲಾಖೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಉ) ಮಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಒಟ್ಟು ಇಂಜಿನಿಯರ್‌ಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾದಕ ದ್ರವ್ಯ ಮಾರಾಟಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :-**

೮೩೫ (೯೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦೧೬-೧೭ ಮತ್ತು ೨೦೧೭-೧೮ನೇ ಸಾಲಿನಲ್ಲಿ ಮಾದಕ ದ್ರವ್ಯ ಮಾರಾಟ ಮತ್ತು ಸೇವನೆಗೆ ಸಂಬಂಧಪಟ್ಟಂತೆ ದಾಖಲಾದ ಪ್ರಕರಣಗಳೆಷ್ಟು ; ಶಿಕ್ಷೆಗೆ ಒಳಪಟ್ಟ ಪ್ರಕರಣ ಎಷ್ಟು ; ಎಷ್ಟು ಆರೋಪಿಗಳು ಈ ದಂಧೆಯಲ್ಲಿ ಭಾಗಿಯಾಗಿದ್ದಾರೆ ; (ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಮಾದಕ ದ್ರವ್ಯಗಳಿಗೆ ಬಲಿಯಾಗುತ್ತಿರುವ ಯುವ/ ಯುವತಿಯರನ್ನು ತಡೆಯಲು ಇಲಾಖೆ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಇ) ಮಾದಕ ದ್ರವ್ಯ ಸೇವನೆ ಮತ್ತು ಮಾರಾಟಕ್ಕೆ ಸಂಬಂಧಪಟ್ಟಂತೆ ಜಿಲ್ಲೆಯಲ್ಲಿ ಕೊಲೆ ನಡೆದಿದೆಯೇ ; (ವಿವರ ನೀಡುವುದು)

(ಈ) ಮಾದಕ ದ್ರವ್ಯಗಳ ಸೇವನೆಗೆ ೩೫ ವರ್ಷದ ಕೆಳಗಿನ ಎಷ್ಟು ಯುವಕ–ಯುವತಿಯರು ಭಾಗಿಯಾಗಿದ್ದಾರೆ ? (ವಿವರ ಒದಗಿಸುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಬಂದ್ ಮಾಡಿದ ವೈನ್‌ಶಾಪ್ ಮತ್ತು ಬಾರ್‌ಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೪೦ (೯೬೭) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಬಂದ್ ಮಾಡಿದ ವೈನ್ ಶಾಪ್ ಮತ್ತು ಬಾರ್‌ಗಳ ಸಂಖ್ಯೆ ಎಷ್ಟು ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವೈನ್ ಶಾಪ್ ಮತ್ತು ಬಾರ್‌ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಎಂ.ಎಸ್. ಐ.ಎಲ್. ವತಿಯಿಂದ ಸರ್ಕಾರ ತೆರೆದ ಮದ್ಯ ಮಾರಾಟ ಕೇಂದ್ರಗಳೆಷ್ಟು ; ಜಿಲ್ಲೆಯ ಯಾವ ಕೇಂದ್ರಗಳಲ್ಲಿ ಮದ್ಯ ಮಾರಾಟ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ; ಇದು ಯಾವ ಆಧಾರದಲ್ಲಿ ತೆರೆಯಲು ವಹಿಸಿಕೊಡಲಾಗಿದೆ ; (ವಿವರ ನೀಡುವುದು)

(ಇ) ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿದೆ ; ಎಷ್ಟು ವೈನ್ ಶಾಪ್‌ಗಳನ್ನು ಬಾರ್‌ಗಳನ್ನಾಗಿ ವಿಸ್ತರಿಸಲಾಗಿದೆ ? (ವಿವರ ನೀಡುವುದು)

## ಕೆಂಗೇರಿಯ ಆಶಾಕಿರಣ ಬಡಾವಣೆಯಲ್ಲಿ ರಸ್ತೆ, ಒಳಚರಂಡಿ ಮತ್ತು ಕುಡಿಯುವ ನೀರಿನ ಸೌಕರ್ಯದ ಕುರಿತು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೮೪೧ (೧೦೪೬) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯ ಕೆಂಗೇರಿ ವಲಯದ ಆಶಾಕಿರಣ ಬಡಾವಣೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿದ್ದರೂ ಸಹಾ ಮೂಲಸೌಕರ್ಯಗಳಾದ ಡಾಂಬರೀಕರಣಗೊಳ್ಳದ ರಸ್ತೆ, ಅಸಮರ್ಪಕ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು ಪೈಪ್‌ಲೈನ್ ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸದರಿ ಬಡಾವಣೆಯಲ್ಲಿ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ? (ವಿವರ ನೀಡುವುದು)

## ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಮಕ್ಕಳ ಹಕ್ಕುಗಳ ಕುರಿತು ತರಬೇತಿ ನೀಡುವ ಬಗ್ಗೆ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೮೪೨ (೧೦೪೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭಾರತ ಸರ್ಕಾರವು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಮಾಡಿ ದೇಶದ ಎಲ್ಲಾ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವ ಹಲವಾರು ನೀತಿ, ಕಾಯ್ದೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಮಕ್ಕಳ ಹಕ್ಕುಗಳ ಕುರಿತು ತರಬೇತಿ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಈ ತರಬೇತಿ ನೀಡುವ ಜವಾಬ್ದಾರಿಯನ್ನು ಯಾವ ಸಂಸ್ಥೆಗೆ ನೀಡಲಾಗುವುದು ;

(ಈ) ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಮತ್ತು ನಗರ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳು ಈ ಹಿಂದೆ ಮಕ್ಕಳ ಹಕ್ಕುಗಳ ಬಗ್ಗೆ ತರಬೇತಿ ನಡೆಸಿದ್ದಾರೆಯೇ; (ವಿವರ ನೀಡುವುದು)

## ರಾಜ್ಯದಲ್ಲಿನ ಪುರಸಭೆ, ನಗರಸಭೆ, ನಗರ ಪಾಲಿಕೆಗಳಿಂದ ನಡೆಸಲ್ಪಡುತ್ತಿರುವ ಪ್ರಾಥಮಿಕ ಶಾಲೆಗಳ ಕುರಿತು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೮೪೩ (೧೦೪೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪುರಸಭೆ, ನಗರಸಭೆ, ನಗರ ಪಾಲಿಕೆಗಳಿಂದ ನಡೆಸಲ್ಪಡುತ್ತಿರುವ ಪ್ರಾಥಮಿಕ ಪೂರ್ವ ಶಿಕ್ಷಣ ಮತ್ತು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು ; (ಲಿಂಗಾವಾರು/ ಜಿಲ್ಲಾವಾರು ವಿವರ ನೀಡುವುದು)

(ಇ) ಈ ಶಾಲೆಗಳಲ್ಲಿ ಯಾವ ರೀತಿ ಪಠ್ಯವನ್ನು (ಸಿಲಬಸ್) ಅನುಸರಿಸಲಾಗುತ್ತಿದೆ ; (ವಿವರ ನೀಡುವುದು)

(ಈ) ಈ ಶಾಲೆಯ ಶಿಕ್ಷಕರಿಗೆ ನೀಡುವ ತರಬೇತಿಯ ಕ್ರಮಗಳೇನು; (ವಿವರ ನೀಡುವುದು)

(ಉ) ಈ ಶಾಲೆಗಳ ಉಸ್ತುವಾರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

## ರಾಜ್ಯ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯ ಚಟುವಟಿಕೆಯ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೪ (೧೦೩೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯಚಟುವಟಿಕೆಗಳೇನು ;

(ಆ) ಸರ್ಕಾರದ ಹಲವು ಇಲಾಖೆಗಳು ತಮ್ಮ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಖಾಸಗಿ ಸಾರ್ವಜನಿಕ ಸಂಪರ್ಕ ಸಂಸ್ಥೆಗಳನ್ನು ನೇಮಿಸಿಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಯಾವ ಯಾವ ಇಲಾಖೆಗಳು ಈ ಸಂಸ್ಥೆಗಳನ್ನು ನೇಮಿಸಿಕೊಂಡಿದೆ; (ಇಲಾಖಾವಾರು ನೇಮಿಸಿಕೊಂಡ ಖಾಸಗಿ ಸಾರ್ವಜನಿಕ ಸಂಪರ್ಕ ಸಂಸ್ಥೆಗಳು ಮತ್ತು ಅವುಗಳ ಚಟುವಟಿಕೆಗಳ ವಿವರ ನೀಡುವುದು)

(ಇ) ಸರ್ಕಾರದ ಕಾರ್ಯಗಳ ಪ್ರಚಾರಕ್ಕಾಗಿ ಪ್ರತಿ ಇಲಾಖೆಯಲ್ಲಿಯೂ ಸಾರ್ವಜನಿಕ ಸಂಪರ್ಕಾಧಿಕಾರಿಗಳನ್ನು ಹೊಂದಿದ್ದರೂ, ಖಾಸಗಿ ಸಂಸ್ಥೆಗಳ್ನು ನೇಮಿಸಿಕೊಳ್ಳುವುದು ಸಿಂಧುವೇ; ಹಾಗಿದ್ದಲ್ಲಿ; ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು ಖಾಸಗಿಕರಣ ಮಾಡುವುದು ಸಮಂಜಸವಲ್ಲವೇ ;

(ಈ) ಈ ಸಂಸ್ಥೆಗಳ ಕಾರ್ಯಚಟುವಟಿಕೆಗಳಿಗಾಗಿ ರಾಜ್ಯ ಸರ್ಕಾರವು ಇದವರೆವಿಗೂ ವೆಚ್ಚ ಮಾಡಿರುವ ಹಣವೆಷ್ಟು ; ಈ ಸಂಸ್ಥೆಗಳಿಂದ ಆಗಿರುವ ಲಾಭವೇನು ?

## ವಿಧಾನಸೌಧ ಕಟ್ಟಡದ ನಿರ್ಮಾಣದ ಬಗ್ಗೆ ಮಾಹಿತಿ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೫ (೧೦೦೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಧಾನಸೌಧ ಕಟ್ಟಡವನ್ನು ಯಾವಾಗ ಕಟ್ಟಲಾಯಿತು ; ಕಟ್ಟಡಕ್ಕೆ ಬೇಕಾದ ಕಲ್ಲುಗಳನ್ನು ಎಲ್ಲಿಂದ ತರಲಾಯಿತು ;

(ಆ) ವಿಧಾನ ಸೌಧ ಕಟ್ಟಡಕ್ಕೆ ಬಳಕೆಯಾದ ಒಟ್ಟು ಕಲ್ಲಿನ ಪ್ರಮಾಣವೆಷ್ಟು; (ವಿವರ ನೀಡುವುದು)

(ಇ) ವಿಧಾನ ಸೌಧ ಕಟ್ಟಡವನ್ನು ಕಟ್ಟಲು ತಗುಲಿದ ವೆಚ್ಚವೆಷ್ಟು ; ಇದುವರೆವಗೂ ಕಟ್ಟಡ ನಿರ್ವಹಣೆಗೆ ವ್ಯಯಿಸಲಾದ ಹಣವೆಷ್ಟು;

(ಈ) ಕಟ್ಟಡದಲ್ಲಿ ಬಳಸಲಾದ ಕಲ್ಲಿನ ನಿರ್ವಹಣೆಗೆ ಆಸಿಡ್ ವಾಷ್ ಮಾಡಬೇಕೆಂಬುದು ನಿಜವೇ ; ಹಾಗಿದ್ದರೆ, ಎಷ್ಟು ವರ್ಷಗಳಿಗೊಮ್ಮೆ ಆಸಿಡ್ ವಾಷ್ ನಡೆಸಬೇಕೆಂಬುದರ ವಿವರ ನೀಡುವುದು ;

(ಉ) ಕೊನೆಯ ಬಾರಿ ಯಾವಾಗ ಯಾರಿಂದ ಎಷ್ಟು ಮೊತ್ತಕ್ಕೆ ಆಸಿಡ್ ವಾಷ್ ಮಾಡಲಾಯಿತು; ಪ್ರತಿಬಾರಿ ಆಸಿಡ್‌ವಾಷ್‌ಗೆ ತಗಲುವ ವೆಚ್ಚ ಎಷ್ಟು ; (ವಿವರ ನೀಡುವುದು)

## GOVERNMENT HAS ADOPTED ANY MECHANISM TO COUNT DOWN THE FOOTFALL AT INDIRA CANTEEN

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೬ (೧೦೩೮) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(a) Whether the State Government has adopted any mechanism to count the footfall at every Indira Canteen; If so, details thereof and canteen wise average visitor details in Bengaluru since November 2017, be given;

(b) Is it true that footfall at every canteen has come down considerably in recent times. if so, details thereof on percentage of drop in the number of visitors, be provided;

(c) Is Kitchens in every Assembly Constituency reduced quantity of food cooked everyday; If so, details thereof on quantity of food prepared kichen wise everday and left over food at these kitchens since January 2018, be given;

(d) Whether the Government has made any arrangements to process the leftover food at kichens and canteens. If so, details thereof on mechanism adopted to treat/process leftover food at kitchens and canteens and details on quantity of food processed by these units on every day basis since January ; be given.

(e) Has Government received any complants about variety of food served at these canteens, if so details thereof about suggestions on food varieties to be served at these canteens, be given ?

## ಬೆಂಗಳೂರು ನಗರದಲ್ಲಿರುವ ಈಜು ಕೊಳಗಳ ಮಾಹಿತಿ ನೀಡುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೭ (೧೦೩೬) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಇರುವ ಈಜುಕೊಳಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು)

(ಆ) ಕೆಲವು ಮನೆಗಳಲ್ಲಿ ಖಾಸಗಿಯಾಗಿ ಈಜುಗೊಳಗಳನ್ನು ನಿರ್ಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಇ) ಬೆಂಗಳೂರು ನಗರದಲ್ಲಿರುವ ಮನೆಗಳಲ್ಲಿ ಮತ್ತು ಅಪಾರ್ಟ್‌ಮೆಂಟ್ಸ್‌ಗಳಲ್ಲಿ ಇರುವ ಖಾಸಗಿ ಈಜುಕೊಳಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ಖಾಸಗಿ ಈಜುಕೊಳಗಳಲ್ಲಿ ಬಳಸಲಾಗುತ್ತಿರುವ ನೀರಿನ ಮೂಲ ಮತ್ತು ಪ್ರಮಾಣವೆಷ್ಟು ; (ವಿವರ ನೀಡುವುದು)

(ಉ) ಖಾಸಗಿ ಈಜುಕೊಳಗಳಲ್ಲಿ ಬಳಸಲಾಗುವ ನೀರಿಗೆ ಪ್ರತ್ಯೇಕ ದರ ನಿಗಧಿ ಮಾಡಲಾಗಿದೆಯೇ ; (ವಿವರ ನೀಡುವುದು)

(ಊ) ಬೆಂಗಳೂರು ನಗರದಲ್ಲಿ ತಲೆದೋರುತ್ತಿರುವ ನೀರಿನ ಸಮಸ್ಯೆಯ ಹಿನ್ನೆಲೆಯಲ್ಲಿ ಖಾಸಗಿ ಈಜುಕೊಳಗಳನ್ನು ನಿಯಂತ್ರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

(ಋ) ಬೇಸಿಗೆಯ ಸಮಯದಲ್ಲಿ ಈ ಖಾಸಗಿ ಈಜುಕೊಳಗಳನ್ನು ಬಂದ್ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಇಲಾಖಾವಾರು ಹಾಗೂ ವೃಂದವಾರು ನೇಮಕಾತಿ ಬಗ್ಗೆ

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೮ (೧೦೧೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೦೮ನೇ ಸಾಲಿನಿಂದ ಈವರೆಗೆ ಪ್ರತಿ ವರ್ಷ ಇಲಾಖಾವಾರು ನೇಮಕಾತಿ ನಡೆಸಲಾಗಿದೆಯೇ ; ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ನೇಮಕಾತಿಗಳನ್ನು ಮಾಡಿಕೊಳ್ಳಲಾಗದೆ ; (ವೃಂದವಾರು ಪೂರ್ಣ ವಿವರ ನೀಡುವುದು)

(ಆ) ಬೋರ್ಡ್, ಕಾರ್ಪೊರೇಷನ್, ಸರ್ಕಾರಿ, ಅರೆಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ನೇಮಕಾತಿಯ ಮಾಹಿತಿಯನ್ನು ಸಹ ವರ್ಷವಾರು ಪ್ರತ್ಯೇಕವಾಗಿ ನೀಡುವುದು ;

(ಇ) ೨೦೦೮ನೇ ಸಾಲಿನಿಂದ ಈವರೆಗೆ ವರ್ಷವಾರು ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಯಾವ ಯಾವ ಸರ್ಕಾರಿ ಇಲಾಖೆಗಳಲ್ಲಿ, ಬೋರ್ಡ್, ಕಾರ್ಪೋರೇಷನ್, ಸರ್ಕಾರಿ ಅರೆಸರ್ಕಾರಿ ಸಂಸ್ಥೆಗಳಲ್ಲಿ ಎಷ್ಟು ನೇಮಕ ಮಾಡಿಕೊಳ್ಳಲಾಗಿದೆ ; ಯಾವ ಯಾವ ಏಜೆನ್ಸಿಗಳ ಮೂಲಕ ಮಾಡಿಕೊಳ್ಳಲಾಗಿದೆ ? (ಪೂರ್ಣ ಮಾಹಿತಿ ನೀಡುವುದು)

## ಸ್ಥಳೀಯ ಸಂಸ್ಥೆಗಳ ವಿವರ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೯ (೫೫೯) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರವನ್ನು ನೀಡುವುದು)

(ಆ) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಲಿ ಇರುವ ಸದಸ್ಯರ ಪೈಕಿ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿಗಳ ಸದಸ್ಯರುಗಳ ಸಂಖ್ಯೆ ಎಷ್ಟು ; (ಸ್ಥಳೀಯ ಸಂಸ್ಥೆವಾರು ಸಂಪೂರ್ಣ ವಿವರ ನೀಡುವುದು)

(ಇ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಸ್ಥಳಿಯ ಸಂಸ್ಥೆಗಳಲ್ಲಿ ಮೀಸಲಿಟ್ಟಿರುವ ೭.೫% ನಿಧಿಯಡಿ ನಿಗದಿಪಡಿಸಿರುವ ಅನುದಾನದ ಸ್ಥಳೀಯ ಸಂಸ್ಥೆವಾರು ಸಂಪೂರ್ಣ ಮಾಹಿತಿ ನೀಡವುದು?

## ಪಾಲಿಕೆ ಬಜಾರ್ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೦ (೫೫೦) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ::–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿಜಯನಗರ ಮೆಟ್ರೋ ನಿಲ್ದಾಣ ಪಕ್ಕದಲ್ಲಿನ ಸರ್ವಿಸ್ ರಸ್ತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬಜಾರ್ ನಿರ್ಮಾಣ ಮಾಡಲಾಗುತ್ತಿದೆಯೇ ; ಈ ಪಾಲಿಕೆ ಬಜಾರ್ ಕೈಗೊಳ್ಳುವ ಉದ್ದೇಶವೇನು ; ಈ ಯೋಜನೆಗೆ ಸರ್ಕಾರವು ನಿಗಧಿಪಡಿಸಿ, ಮಂಜೂರು ಮಾಡಿದ ಅನುದಾನವೆಷ್ಟು ; ಹಾಗೂ ಕಾಮಗಾರಿಗೆ ಇರುವ ಕಾಲಮಿತಿ ಏನು ) ಸಂಪೂರ್ಣ ಮಾಹಿತಿ ನೀಡುವುದು)

(ಆ) ಪಾಲಿಕೆ ಬಜಾರ್ ನಿರ್ಮಾಣ ಮಾಡುವ ಸ್ಥಳದಲ್ಲಿ ಇರುವ ಮರಗಳನ್ನು ತೆರವು ಮಾಡಲಾಗುವುದೇ ; ಹಾಗಿದ್ದಲ್ಲಿ ಇದರಿಂದ ಪರಿಸರಕ್ಕೆ ಹಾನಿಯಾಗವುದಿಲ್ಲವೇ ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪಾಲಿಕೆ ಬಜಾರ್ ನಿರ್ಮಾಣ ಮಾಡುತ್ತಿರುವ ಸ್ಥಳದಲ್ಲಿ ಬೀದಿಬದಿ ವ್ಯಾಪಾರ ಮಾಡುತ್ತಿರುವ ವ್ಯಾಪಾರಿಗಳ ಸಂಖ್ಯೆ ಎಷ್ಟು ;

(ಈ) ಪಾಲಿಕೆ ಬಜಾರ್‌ನಲ್ಲಿ ಬಡವರ್ಗದ ಎಷ್ಟು ಜನ ವ್ಯಾಪಾರಿಗಳಿಗೆ ಅಂಗಡಿ ವಿತರಿಸಲಾಗುವುದು, ಅಂಗಡಿ ವಿತರಿಸಲು ಅನುಸರಿಸಲಾಗುವ ಮಾನದಂಡಗಳೇನು ; ಅಂಗಡಿ ಮಳಿಗೆ ಸಿಗದಿದ್ದಲ್ಲಿ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ ? (ಸಂಪೂರ್ಣ ಮಾಹಿತಿ ನೀಡುವುದು)

## ಕೊಡಗು ಜಿಲ್ಲೆಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೧ (೯೬೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾಗಿರುವ ವಿವಿಧ ಶ್ರೇಣಿಯ ಹುದ್ದೆಗಳು ಎಷ್ಟು ; ಅವು ಯಾವುವು ; (ಪ್ರತಿ ಸ್ಥಳೀಯ ಸಂಸ್ಥೆಯ ವಿವರ ನೀಡುವುದು)

(ಆ) ಸದರಿ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಅವು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಇ) ಈ ರೀತಿ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ಸೇವೆಗಳು ಸರಿಯಾದ ಸಮಯಕ್ಕೆ ದೊರೆಯದಿದ್ದು, ನಕಾರಾತ್ಮಕ ಪರಿಣಾಮ ಬೀರುವುದಿಂದ, ಸದರಿ ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿಮಾಡಲು ಸರ್ಕಾರ ಕ್ರಮ ವಹಿಸುವುದೇ ?

## ಮಡಿಕೇರಿ ಮತ್ತು ಗೋಣಿಕೊಪ್ಪ ದಸರಾ ಉತ್ಸವಕ್ಕೆ ಅನುದಾನ ಘೋಷಿಸುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೨ (೯೬೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗಿನಲ್ಲಿ ಪ್ರತಿ ವರ್ಷ ನಡೆಯುವ ಐತಿಹಾಸಿಕ ಪರಂಪರೆಯುಳ್ಳ ಮಡಿಕೇರಿ ಹಾಗೂ ಗೋಣಿಕೊಪ್ಪ ದಸರಾ ಉತ್ಸವಕ್ಕೆ ರಾಜ್ಯದ ಮುಂಗಡ ಪತ್ರದಲ್ಲಿ ಅನುದಾನವನ್ನು ಘೋಷಿಸಲಾಗುವುದೇ ;

(ಆ) ಸದರಿ ದಸರಾ ಉತ್ಸವಗಳಿಗೆ ಹೆಚ್ಚಿನ ಅನುದಾನವನ್ನು ಮುಂಗಡ ಪತ್ರದಲ್ಲಿ ಘೋಷಿಸಿ ಈ ಎರಡೂ ದಸರಾವನ್ನು ಮೈಸೂರು ದಸರಾ ರೀತಿಯಲ್ಲಿ ವಿಜೃಂಭಣೆಯಿಂದ ಆಚರಿಸುವ ಬಗ್ಗೆ ಸರ್ಕಾರದ ನಿಲುವೇನು ?

## ಮಹಾನಗರ ತ್ಯಾಜ್ಯ ಹಾಗೂ ಕಾರ್ಖಾನೆಗಳ ಮಾಲಿನ್ಯದಿಂದ ಕೆರೆಗಳು ಹಾಗೂ ಪರಿಸರ ನಾಶವಾಗುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೫೩ (೧೦೪೧) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಮಹಾನಗರಗಳ ತ್ಯಾಜ್ಯದಿಂದಾಗಿ ಹಾಗೂ ಕಾರ್ಖಾನೆಗಳ ಮಾಲಿನ್ಯದಿಂದಾಗಿ ಕೆರೆಗಳು ಹಾಳಾಗುತ್ತಿರುವುದು ಹಾಗೂ ಸಂಪೂರ್ಣ ಕೆರೆಗಳೇ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕೆರೆಗಳ ಮಾಲಿನ್ಯದಿಂದಾಗಿ ಪರಿಸರ ಕೆಡಿಸುವುದನ್ನು ತಪ್ಪಿಸುವ ದೃಷ್ಟಿಯಿಂದ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದೆ ;

(ಇ) ರಾಜ್ಯದ ಮಹಾನಗರಗಳಲ್ಲಿ ಮಾಲಿನ್ಯದಿಂದ ನಶಿಸುತ್ತಿರುವ ಕೆರೆಗಳನ್ನು ಉಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; ಈ ನಿಟ್ಟಿನಲ್ಲಿ ರೂಪಿಸಿರುವ ಯೋಜನೆಗಳಾವುವು ; (ವಿವರ ನೀಡುವುದು)

(ಈ) ಕೆರೆಗಳನ್ನು ಹಾಗೂ ಕೆರೆಗಳ ಪರಿಸರವನ್ನು ಮಲೀನಗೊಳಿಸಿ ನಾಶಮಾಡುತ್ತಿರುವ ಕಾರ್ಖಾನೆಗಳ ವಿರುದ್ಧ ಹಾಗೂ ಒತ್ತುವರಿ ಮಾಡುತ್ತಿರುವ ಸಮಾಜ ಘಾತಕ ಶಕ್ತಿಗಳ ವಿರುದ್ಧ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ; (ವಿವರ ನೀಡುವುದು)

(ಉ) ಮಹಾನಗರಗಳಲ್ಲಿ ಹಾಗೂ ಮಹಾನಗರಗಳ ಸುತ್ತಮುತ್ತ ೨೦೧೭–೧೮ರವರೆಗೆ ಎಷ್ಟು ಕೆರೆಗಳು ಸಂಪೂರ್ಣ ನಶಿಸಿಹೋಗಿವೆ ; ಎಷ್ಟು ಕೆರೆಗಳು ಒತ್ತುವರಿಯಾಗಿವೆ ; ಅವುಗಳ ಒಟ್ಟು ವಿಸ್ತೀರ್ಣವೆಷ್ಟು ; ಅವುಗಳ ಪುನರ್ಜೀವನಗೊಳಿಸಲು ಸರ್ಕಾರದ ಮುಂದಿನ ಕ್ರಮಗಳೇನು ? (ವಿವರ ನೀಡುವುದು)

## ನಗರಾಭಿವೃದ್ಧಿ ಇಲಾಖೆ ಅಧೀನದ ಸ್ಥಳೀಯ ಸಂಸ್ಥೆಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೫೪ (೯೧೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿರುವ ಸ್ಥಳೀಯ ಸಂಸ್ಥೆಗಳ ಸಂಖ್ಯೆ ಎಷ್ಟು ; ಅವುಗಳು ಯಾವುವು ; (ಜಿಲ್ಲಾವಾರು, ಸ್ಥಳೀಯವಾರು ಮಾಹಿತಿ ನೀಡುವುದು)

(ಆ) ಈ ಸ್ಥಳೀಯ ಸಂಸ್ಥೆಯ ಚುನಾಯಿತ ಸದಸ್ಯರ ಸಂಖ್ಯೆ ಎಷ್ಟು ; ನಾಮನಿರ್ದೇಶಿತ ಸದಸ್ಯರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ಸ್ಥಳೀಯವಾರು ಮಾಹಿತಿ ನೀಡುವುದು)

(ಇ) ಈ ಸ್ಥಳೀಯ ಸಂಸ್ಥೆಗಳ ವಿವಿಧ ಆದಾಯ ಮೂಲಗಳು ಯಾವುವು; ಕಳೆದ ಮೂರು ವರ್ಷಗಳಲ್ಲಿ ಈ ಸ್ಥಳೀಯ ಸಂಸ್ಥೆಗಳಿಗೆ ಸರಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ; ವೆಚ್ಚ

ಮಾಡಲಾದ ಅನುದಾನವೆಷ್ಟು ? (ಜಿಲ್ಲಾವಾರು, ಸ್ಥಳೀಯವಾರು ಮಾಹಿತಿ ನೀಡುವುದು)

## ರಾಜ್ಯ ಸರಕಾರಿ ನೌಕರರ ಎನ್.ಪಿ.ಎಸ್. ಯೋಜನೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೫೫ (೯೧೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೦೬ ರ ನಂತರ ನೇಮಕವಾದ ರಾಜ್ಯ ಸರಕಾರಿ ನೌಕರರಿಗೆ ಜಾರಿಗೆ ತಂದ ಎನ್.ಪಿ.ಎಸ್. ಯೋಜನೆ ನೌಕರರಿಗೆ ಲಾಭದಾಯಕವಾಗಿದೆ ಎಂದು ಸರಕಾರ ಪರಿಗಣಿಸಿದೆಯೇ ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) ಸರಕಾರದಿಂದ ಎನ್.ಪಿ.ಎಸ್. ಯೋಜನೆ ಹಾಗೂ ಹಿಂದಿನ ಪಿಂಚಣಿ ಯೋಜನೆಯ ತುಲನಾತ್ಮಕ ಅಧ್ಯಯನ ನಡೆಸಲಾಗಿದೆಯೇ ; ಹೌದಾದಲ್ಲಿ, ಅಧ್ಯಯನದ ವರದಿಯ ಪ್ರತಿಯನ್ನು ನೀಡುವುದು;

(ಆ) ೨೦೦೬ ರ ನಂತರ ನೇಮಕವಾದ ರಾಜ್ಯ ಸರಕಾರಿ ನೌಕರರ ಹಳೆ ಪಿಂಚಣಿ ಹಾಗೂ ಎನ್.ಪಿ.ಎಸ್. ಯೋಜನೆಯಲ್ಲಿ ಆಯ್ಕೆಗೆ ಅವಕಾಶ ನೀಡಲಾಗಿದೆಯೇ ; ಇಲ್ಲವಾದಲ್ಲಿ ಅವಕಾಶ ಕಲ್ಪಿಸುವ ಉದ್ದೇಶ ಸರಕಾರದ ಮುಂದಿದೆಯೇ ;

(ಇ) ಸರ್ಕಾರವು ಎನ್.ಪಿ.ಎಸ್. ಯೋಜನೆಯನ್ನು ಜಾರಿಗೆ ತರುವಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖದಂತೆ ಪಿಂಚಣಿ ಎನ್ನುವುದು ನೌಕರರ ಇಳಿವಯಸ್ಸಿನ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗಾಗಿ ನೀಡುವ ಹಕ್ಕಿನಂಶದ ಹಣವೆನ್ನುವುದನ್ನು ಗಮನದಲ್ಲಿರಿಸಿಕೊಂಡಿದೆಯೇ ; ಹೌದಾದಲ್ಲಿ, ಸರ್ಕಾರಿ ನೌಕರರ

ಹಣವನ್ನು ಷೇರುಪೇಟೆಯಲ್ಲಿ ತೊಡಗಿಸಿರುವುದು ಸಮಂಜಸವೇ; ಷೇರು ಪೇಟೆಯಲ್ಲಿ ತೊಡಗಿಸಿದ ಹಣಕ್ಕೆ ಭದ್ರತಾ ಬಾಂಡ್‌ನ್ನು ಸರ್ಕಾರದಿಂದ ಸಂಬಂದಿಸಿದ ನೌಕರರಿಗೆ ನೀಡಲಾಗಿದೆಯೇ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

(ಈ) ಎನ್.ಪಿ.ಎಸ್. ಯೋಜನೆಯ ಕುರಿತು ರಾಜ್ಯ ಸರ್ಕಾರಿ ನೌಕರರಲ್ಲಿ ಭಾರಿ ವಿರೋಧವಿರುವುದು ಸರ್ಕಾರದ ಗಮನದಲ್ಲಿದೆಯೇ ; ಈ ಬಗ್ಗೆ ಎನ್.ಪಿ.ಎಸ್. ಯೋಜನೆಯನ್ನು ವಿರೋಧಿಸಿ ದಿನಾಂಕ: ೨೦.೦೧.೨೦೧೮ ರಂದು ರಾಜ್ಯ ಸರ್ಕಾರಿ ನೌಕರರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹೌದಾದಲ್ಲಿ, ಅದರ ಬೇಡಿಕೆಯ ಈಡೇರಿಕೆಗೆ ಸರ್ಕಾರದ ಯೋಜನೆಯೇನು ?

## ವಾರಾಹಿ ನದಿಯಿಂದ ಉಡುಪಿ ನಗರಕ್ಕೆ ಕುಡಿಯುವ ನೀರು ಪೂರೈಕೆ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೫೬ (೯೧೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಾರಾಹಿ ನದಿಯಿಂದ ಉಡುಪಿ ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಯ ಸಂಬಂಧ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್)ಯನ್ನು ತಯಾರಿಸಲಾಗಿದೆಯೇ; ಹೌದಾದಲ್ಲಿ, ಅದರ ಅಂದಾಜು ವೆಚ್ಚವೆಷ್ಟು ; (ವಿಸ್ತೃತ ಯೋಜನಾ ವರದಿ ಪ್ರತಿ ಒದಗಿಸುವುದು)

(ಆ) ಎತ್ತಿ ನ ಹೊಳೆ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ೨೭೪ ಕಿ.ಮೀ. ವರೆಗೆ ಗುರುತ್ವಾ ಕಾಲುವೆಯ ಮೂಲಕ ಅಂದಾಜು ೧೨೯೧೨.೩೬ ಲಕ್ಷ ₹. ವೆಚ್ಚದಲ್ಲಿ ೭ ಜಿಲ್ಲೆಯಲ್ಲಿ ೨೯ ತಾಲ್ಲೂಕುಗಳ ೬೫೫೭ ಗ್ರಾಮದಲ್ಲಿರುವ ೬೮.೩೫ ಲಕ್ಷ ಜನರಿಗೆ ಕುಡಿಯುವ ನೀಡಿನ್ನು ಪೂರೈಸುವ ಸರಕಾರಕ್ಕೆ ಉಡುಪಿ ನಗರಕ್ಕೆ ನೀರು ಸರಬರಾಜು ಮಾಡಲು ಇರುವ ತೊಡಕುಗಳು ಯಾವುವು;

(ಇ) ಉಡುಪಿ ನಗರಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯ ಕೊಳವೆ ಮಾರ್ಗವು ಹಾದು ಹೋಗುವ ಮಾರ್ಗದಲ್ಲಿರುವ ಗ್ರಾಮ ಪಂಚಾಯಿತಿಗಳು ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವದಿಂದಾಗಿ ಟ್ಯಾಂಕರ್ ಮೂಲಕ ಸರಬರಾಜು ಮಾಡುತ್ತಿರುವಾಗ ಇಲಾಖೆಯ ನಿಯಮವನ್ನು ಮೀರಿ ಕೊಳವೆ ಮಾರ್ಗ ಹಾದು ಹೋಗುವ ಗ್ರಾಮ ಪಂಚಾಯತಿಗಳಿಗೆ ಕುಡಿಯುವ ನೀರನ್ನು ಒದಗಿಸದೇ ನೇರವಾಗಿ ಉಡುಪಿಗೆ ನೀರನ್ನು ಕೊಂಡೊಯ್ದು ಅಲ್ಲಿ ಶುದ್ಧೀಕರಿಸಿ ನೀಡುವ ಉದ್ದೇಶದ ಔಚಿತ್ಯವೇನು ; ಇದರಿಂದ ಆ ಭಾಗದ ಗ್ರಾಮಗಳ ಜನತೆ ಪ್ರತಿಭಟನೆಯು ಹಾದಿ ಹಿಡಿಯುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ; ನೀರನ್ನು ಒದಗಿಸಲು ಇರುವ ತಾಂತ್ರಿಕ ತೊಡಕುಗಳೇನು ?

## ಹೈದರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳಲ್ಲಿ ಖಾಲಿ ಇರುವ, ಭರ್ತಿಯಾದ, ಮಂಜೂರಾದ ಹುದ್ದೆಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೫೭ (೧೦೪೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೩೭೧ (ಜೆ) ಅನುಷ್ಠಾನಗೊಂಡ ನಂತರ ಹುದ್ದೆಗಳನ್ನು ವರ್ಗೀಕರಿಸಿದ ನಂತರ ಹೈದರಾಬಾದ್–ಕರ್ನಾಟಕ' ೬ ಜಿಲ್ಲೆಗಳ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ನೇರ ನೇಮಕಾತಿಗಾಗಿ ಹಾಗೂ ಮುಂಬಡ್ತಿಗಾಗಿ ಮೀಸಲಿರಿಸಿದ್ದ ಹುದ್ದೆಗಳು ಎಷ್ಟು ; (ಜಿಲ್ಲಾವಾರು, ಇಲಾಖಾವಾರು ಹಾಗೂ ವೃಂದವಾರು ಹುದ್ದೆಗಳ ಸಂಪೂರ್ಣ ಮಾಹಿತಿ ನೀಡುವುದು)

(ಆ) ೩೭೧ (ಜೆ) ಅಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ೬ ಜಿಲ್ಲೆಗಳಲ್ಲಿ ವೃಂದವಾರು, ಹುದ್ದೆವಾರು, ಮೀಸಲಾತಿ ವರ್ಗೀಕರಣ ಮಾಡದೇ ಇದ್ದ ಸರ್ಕಾರಿ/ಅರೆ ಸರ್ಕಾರಿ ಇಲಾಖೆಗಳು ಯಾವುವು; (ಇಲಾಖಾವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ೩೭೧ (ಜೆ) ಅಡಿಯಲ್ಲಿ ಸರ್ಕಾರಿ /ಅರೆ ಸರ್ಕಾರಿ ಇಲಾಖೆಗಳಲ್ಲಿ ಮೀಸಲಾತಿ ಕಲ್ಪಿಸದೆ ಬಹಳಷ್ಟು ವಿಳಂಬವಾಗಿ ಅಭಿವೃದ್ಧಿ ಕುಂಠಿತವಾಗುತ್ತಿದ್ದು, ಇದನ್ನು ಸರಿಪಡಿಸಿ ಯಾವ ಕಾಲಮಿತಿಯೊಳಗೆ ಮೀಸಲಾತಿ ಕಲ್ಪಿಸಲಾಗುವುದು ?

## ಕುಡಿಯುವ ನೀರಿನ ಘಟಕಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು ) :–**

೮೫೭(A) (೧೧೩೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಗರ ಸಭೆಗಳು, ಪುರ ಸಭೆಗಳು ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಘಟಕಗಳನ್ನು ಸರ್ಕಾರದಿಂದ ನಿರ್ಮಾಣ ಮಾಡುತ್ತಿರುವುದು ನಿಜವೇ ;

(ಆ) ಹಾಗಿದ್ದರೆ, ಸರ್ಕಾರ ೨೦೦೮–೦೯ ರಿಂದ ೨೦೧೭–೧೮ ನೇ ಸಾಲಿನವರೆಗೆ ಎಷ್ಟು ಕುಡಿಯುವ ನೀರಿನ ಘಟಕಗಳನ್ನು ಮಂಜೂರು ಮಾಡಲಾಗಿದೆ ; ಎಷ್ಟು ಘಟಕಗಳು ಪೂರ್ಣಗೊಂಡು ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ; ಬಾಕಿ ಇರುವ ಘಟಕಗಳ ಸಂಖ್ಯೆ ಎಷ್ಟು ; ಸದರಿ ಘಟಕಗಳ ಕಾಮಗಾರಿ ಪ್ರಗತಿ ಯಾವ ಹಂತದಲ್ಲಿದೆ ? (ಸಂಪೂರ್ಣ ವಿವರವನ್ನು ಸ್ಥಳೀಯವಾರು ಒದಗಿಸಲಾಗುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0324/800 ಪ್ರತಿಗಳು/16–02–2018